11) ಶಾಸನ ರಚನೆ :

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

1. ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ – 2012

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಕೆ.ಎಸ್. ಈಶ್ವರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು, ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ – 2012ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ವಿಧೇಯಕವನ್ನು ವಿವರಿಸುವುದು.

ಶ್ರೀ ಕೆ.ಎಸ್. ಈಶ್ವರಪ್ಪ : (ಮಾನ್ಯ ಉಪಮುಖ್ಯ ಮಂತ್ರಿಗಳು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಕಂದಾಯ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಕರ್ನಾಟಕ ಭೂ ಕಂದಾಯ ತಿದ್ದುಪಡಿ ಅಧಿನಿಯಮ ಎಂದು ಕರೆಯುವುದನ್ನು 94ಸಿ ಪ್ರಕರಣದ ತಿದ್ದುಪಡಿಯಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) 94 ಸಿ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸುವುದಕ್ಕಾಗಿ ಇದನ್ನು ತರಲಾಗಿದೆ. ಇದು 14 ವರ್ಷದ ಕೆಳಗೆ ಗ್ರಾಮೀಣ ಪ್ರದೇಶದಲ್ಲಿ ವಾಸ ಮಾಡುವಂತಹ ಬಡವರು ಅಲ್ಲಿ ಸೂರನ್ನು ಏನು ಕಟ್ಟಿಕೊಂಡಿದ್ದಾರೆ, ಅದಕ್ಕೆ ಸರ್ಕಾರಿ ಭೂಮಿಗಳಲ್ಲಿರುವ ಭೂಮಿಗೆ ಹಕ್ಕನ್ನು ಕೊಡುವ ದೃಷ್ಟಿಯಿಂದ ಈ ವಿಧೇಯಕವನ್ನು ತರುತ್ತಿದ್ದೇವೆ. ಈ ಒಂದು ತಿದ್ದುಪಡಿಯಿಂದ ಇಡೀ ಕರ್ನಾಟಕ ರಾಜ್ಯದಲ್ಲಿ, ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಭೂಮಿಯಲ್ಲಿ ಅವರು ವಾಸ ಮಾಡುವಂತಹ ಸೈಟಿನ ಹಕ್ಕು ಅವರಿಗೆ ಸಿಗುತ್ತಿದೆ. ನಿಜವಾಗಿಯೂ ಈ ವಿಧೇಯಕವನ್ನು ಮಂಡನೆ ಮಾಡುವುದಕ್ಕೆ ಯಾವ ಜನ್ಮದ ಪುಣ್ಯವೋ ನನಗಂತೂ ಗೊತ್ತಿಲ್ಲ. ಕರ್ನಾಟಕ ರಾಜ್ಯದಲ್ಲಿ ಗುಡಿಸಲು

ರಹಿತ ಗ್ರಾಮವನ್ನು ಮಾಡಬೇಕೆಂಬ ಕಲ್ಪನೆ ನಮಗೆ ಇತ್ತೋ, ಅದಕ್ಕೆ ಒತ್ತು ಕೊಡುವ ದಿಕ್ಕಿನಲ್ಲಿ ಈ ಒಂದು ವಿಧೇಯಕವನ್ನು ನಾನು ಮಂಡನೆ ಮಾಡುತ್ತಿದ್ದೇನೆ.

ಶ್ರೀ ಸುನಿಲ್ ವಿ. ಹೆಗಡೆ : ಮಾನ್ಯ ಅಧ್ಯಕ್ಷರೆ, ಶಾಸಕರಿಗೆ, ಅಕ್ರಮ ಸಕ್ರಮ ಸಮಿತಿಗೆ ಕೊಡುತ್ತಾರೋ ಅಥವಾ ಡಿ.ಸಿ., ತಹಶೀಲ್ದಾರ್ ಅವರು ಮಾಡುತ್ತಾರೋ, ...

ಅಧ್ಯಕ್ಷರು : 94ಸಿ ಯಲ್ಲಿ ಒಂದು ಸಾರಿ ನೋಡಿ. ಎಲ್ಲವನ್ನೂ ಇಲ್ಲಿಯೇ ಹೇಳಬೇಕೆಂದರೆ ಹೇಗೆ?

ಶ್ರೀ ಟಿ.ಬಿ. ಜಯಚಂದ್ರ : 94ಸಿ ಗೆ ನೀವು ಒಂದು ತಿದ್ದುಪಡಿಯನ್ನು ತರುತ್ತಿದ್ದೀರಿ. ತಿದ್ದುಪಡಿಯನ್ನು ತರಬೇಕಾದರೆ, ಇದರಲ್ಲಿ ಬಹಳ ಮುಖ್ಯವಾಗಿ ಹೇಳಿರುವುದೇನೆಂದರೆ ಗುಡಿಸಲು ರಹಿತ ರಾಜ್ಯವನ್ನಾಗಿ ಮಾಡಬೇಕೆಂದು ಹೊರಟಾಗ ಆಶ್ರಯಕ್ಕೋಸ್ಕರ ಸಹಾಯವಾಗುತ್ತದೆ ಎನ್ನುವ ಮಾತನ್ನು ಹೇಳಿದಿರಿ. ನೀವು ಕೊಟ್ಟಿರುವುದೆಲ್ಲಾ ಓದಿದ್ದೇನೆ. ಆಶ್ರಯ ಎಂದರೆ ಏನು?

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೇನೆಂದರೆ, ಸರ್ಕಾರವು ಆಶ್ರಯ ವಸತಿ ಯೋಜನೆಯಡಿ ನಿಗದಿ ಪಡಿಸಿದ ಅರ್ಹತೆಯ ಷರತ್ತುಗಳನ್ನು ಯಥಾವತ್ತಾಗಿ ಅನ್ವಯಿಸುತ್ತದೆ ಎಂದು ಇದೆ. ಏನು ಷರತ್ತುಗಳನ್ನು ಆಶ್ರಯ ಸೈಟುಗಳನ್ನು ಪಡೆಯತಕ್ಕಂಥದ್ದರಲ್ಲಿ ಮಾಡುತ್ತೇವಲ್ಲಾ, ಅದೇ ರೂಪದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ವಾಸ ಮಾಡುತ್ತಿರುವಂಥ, ಸರ್ಕಾರಿ ಭೂಮಿಯಲ್ಲಿ ವಾಸ ಮಾಡುತ್ತಿರುವಂಥ ಬಡವರಿಗೆ ಕೊಡುವುದಕ್ಕೆ ಅದೇ ಷರತ್ತನ್ನು ಹಾಕುತ್ತಿದ್ದೇವೆ ಎಂದು ಹೇಳುತ್ತಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : ನೀವು ವರ್ಷಕ್ಕೆ ಒಂದು ಸಾರಿ ಆಶ್ರಯ ಯೋಜನೆಯಲ್ಲಿ, ಬಸವ ಯೋಜನೆ, ಇಂದಿರಾ ಆವಾಸ್ ಯೋಜನೆ ಎಂದು ಹೇಳಿ ಮನೆಗಳನ್ನು ಕೊಡುತ್ತಾ ಹೋಗುತ್ತೀರಿ. ನೀವು ಮನೆಗಳನ್ನು allocation ಕೊಟ್ಟ ಮೇಲೆ, ಸೈಟ್ ಇಲ್ಲದೇ ಇರುವವರಿಗೆ ಮನೆಗಳನ್ನು ಕೊಟ್ಟ ನಂತರವೇ ಅವರು basement ಹಾಕಲಿಕ್ಕೆ ಶುರು ಮಾಡುವುದು. ನಿಮ್ಮ ಗುರಿ ಸಾಧನೆಯಾಗಬೇಕು ನಿಜ. ನಾನು ಒಪ್ಪುತ್ತೇನೆ. ಆದರೆ ಇದು ಎಲ್ಲಿ ತಪ್ಪುತ್ತಿದೆ ಎನ್ನುವುದಕ್ಕೆ ಹೇಳುತ್ತಿದ್ದೇನೆ. ಏನು ಪುಣ್ಯನೋ ಏನೋ, ಏನು ಕಥೆಯೋ ಏನೋ ನಾನು ತರುತ್ತಿದ್ದೇನೆ ಎಂದು ತಾವು ಹೇಳಿದಿರಿ. ಅದು

ಪ್ರಯೋಜನವಾಗಬೇಕಲ್ಲವೇ? ಈಗ ಇಲ್ಲಿಯವರೆಗೂ ಯಾರಾದರೂ basement ಹಾಕಲಿಕ್ಕೆ ಸಾಧ್ಯವಾಗಿದೆಯೇ? ಇಲ್ಲ. ಹಾಕುವುದಕ್ಕೆ ಆಗಿಲ್ಲ.

ಅಧ್ಯಕ್ಷರು : ಹಕ್ಕುಪತ್ರ ಇಲ್ಲದ್ದಕ್ಕೆ ಹಾಕಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಒಂದು ನಿಮಿಷ, basement ಹಾಕಲಿಕ್ಕೆ ಆಗಿಲ್ಲ. basement ಹಾಕಲಿಕ್ಕೆ ಜಾಗಗಳನ್ನು ಗುರುತಿಸಿಕೊಂಡಿರುವವರು ಕೆಲವರು ಇದ್ದಾರೆ. ಹಾಕುವುದಕ್ಕಂತೂ ಆಗಿಲ್ಲ. ಯಾರಿಗೂ ಅದನ್ನು ಬಿಟ್ಟು ಕೊಡುವುದಕ್ಕೆ ಆಗಿಲ್ಲ. ಆದರೆ ಜಾಗ ಮಾತ್ರ ಗುರುತು ಮಾಡಿಕೊಂಡಿರುವವರು ಇದ್ದಾರೆ. ನೀವು, application ಹಾಕಬೇಕಾದಾಗ, ಜನವರಿಯ ವರೆಗೂ ಎಂದು ಹೇಳುತ್ತೀರಿ, ಜನವರಿಯಿಂದ ಈ date ವರೆಗೂ ತೆಗೆದುಕೊಳ್ಳಿ. ಇಲ್ಲಿಯವರೆಗೂ, ಈ ವರ್ಷ, ಈ ಸಾಲಿನಲ್ಲಿ ಕೊಡತಕ್ಕಂಥ ಆಶ್ರಯ ಮನೆಗಳು ಎಲ್ಲದ್ದಕ್ಕೂ ಸೇರುವುದಕ್ಕೆ ಅವಕಾಶ ಆಗಬೇಕು. ಅದು ಒಂದು ಯೋಚನೆ ಮಾಡಿ. ಇನ್ನೊಂದು Section 6(B) ನಲ್ಲಿ other Municipal Corporations under Karnataka Munisipalities Act of 1976, the outer limit of 10 km. shall apply ಎಂದು ಹೇಳುತ್ತೀರಿ. ನೀವು table ನಲ್ಲಿಯೂ ಕೂಡ 10 ಕಿ.ಮೀ. ಎಂದು ಹೇಳುತ್ತೀರಿ. ಆನಂತರ 6(C) ನಲ್ಲಿ ಏನು ಹೇಳುತ್ತೀರೆಂದರೆ, 3 km. from the periphery of TMC's and Town Panchayaths ಎಂದು ಹೇಳುತ್ತೀರಿ. ಅಲ್ಲಿಗೆ CMC ಗೆ ಏನು ಮಾಡಿದ್ದೀರಿ? ಅಲ್ಲಿ CMC ಪ್ರಶ್ನೆ ಬಂದಿಲ್ಲ. ಅದನ್ನು addition ಮಾಡಬೇಕಾಗುತ್ತದೆ. CMC ಗೆ ಅಂದರೆ, ನೀವು 5.ಕಿ.ಮೀ. ಯಾವುದಕ್ಕೆ ಎಂದು ಆ table ನಲ್ಲಿ ಹಾಕಿದ್ದೀರೋ, ಆ table ನಲ್ಲಿ ಹಾಕಿರುವುದು ಇಲ್ಲಿ ಬರಬೇಕಾಗುತ್ತದೆ. ಇನ್ನೊಂದು, 2,400 ಚದರ ಅಡಿ ಎಂದು ಹೇಳಿದ್ದೀರಿ ಅದೊಂದು ಒಳ್ಳೆಯ decision ಆಗುತ್ತದೆ. ಇನ್ನೊಂದು ವಿಷಯ ಕೇಳುವುದಕ್ಕೆ ಇಷ್ಟಪಡುತ್ತೇನೆ, Land Revenue Act ನ amendment ತರತಕ್ಕಂಥದ್ದು ಹಿಂದೆ ಇರುವಂಥದ್ದು. 1998 ವರೆಗೂ ಕೂಡ regularize ಮಾಡಲಿಕ್ಕೆ ಅವಕಾಶವಿದೆ. ಆವತ್ತು 1999 amendment ಇತ್ತಲ್ಲಾ, amendment ನಲ್ಲಿ ಕೆಲವರು ಹೇಳುವ ಪ್ರಕಾರ, municipal areas ಮಾಡಲು ಅವಕಾಶ ಇತ್ತು ಎಂದು ಹೇಳುತ್ತಾರೆ. ಈಗ ನೀವು ಈ Clause ಅನ್ನು ಹಾಕಿರುವುದರಿಂದ

municipal areas ಗೆ ಬರುವುದಿಲ್ಲ. ಈಗ ಇವೆಲ್ಲಾ ಎಲ್ಲಿಗೆ ಬರುತ್ತವೆ ಅಂದರೆ, ಬೆಂಗಳೂರು ಮಹಾನಗರಪಾಲಿಕೆ boundary ಯಿಂದ 18 ಕಿ.ಮೀ. ದೂರ, corporation ನಿಂದ 10 ಕಿ.ಮೀ. Municipality areas ನಿಂದ 5 ಕಿ.ಮೀ. ಈ ರೀತಿಯಾಗಿ ಇದ್ದಾಗ ಕೆಲವರು outer limits ನಲ್ಲಿರತಕ್ಕವರಿಗೆ ಸಹಾಯವಾಗಬಹುದು. 1998 ರಲ್ಲಿ ನನಗೆ ಗೊತ್ತಿರುವ ಪ್ರಕಾರ, ಏಕೆಂದರೆ you can verify the records also. ನಿಮಗೆ municipal areas ನಲ್ಲೂ ಕೊಡುವುದಕ್ಕೆ, ಮಾಡುವುದಕ್ಕೆ ಅವಕಾಶವಿತ್ತು ಎಂದು ಅನಿಸುತ್ತಿದೆ. ಬಹುಶಃ ಇತ್ತೋ ಇಲ್ಲವೋ ನನಗಂತೂ ಗೊತ್ತಿಲ್ಲ. ಏಕೆಂದರೆ, ಬೆಂಗಳೂರಿನಲ್ಲಿ ಇರಲಿಲ್ಲ, ತುಮಕೂರು ಏರಿಯಾದಲ್ಲಿ ಇತ್ತು ಎಂದು ಹೇಳುತ್ತಾರೆ. ಅದು ನನಗೆ ಗೊತ್ತಿಲ್ಲ. ಅದೊಂದು verify ಮಾಡಿ. ಯಾರೋ ಶಾಸಕರು ಹೇಳಿದರು ಅದಕ್ಕೋಸ್ಕರ ತಂದಿದ್ದೇನೆ ಎಂದು ಹೇಳಬೇಡಿ. ಮಾನ್ಯ ಅಧ್ಯಕ್ಷರೆ, ಇದು ಒಳ್ಳೆಯ ಮಸೂದೆ ಆಗುತ್ತದೆ ವಿನಃ, ಆಗುತ್ತದೆ ಅದರಲ್ಲೇನೂ ಅನುಮಾನವಿಲ್ಲ. ಆದರೆ ಎಲ್ಲೋ ಒಂದು ಕಡೆ ಆಶ್ರಯದವರಿಗೆ ಮನೆ ಕಟ್ಟಬೇಕಾದಂತಹ ಸಂದರ್ಭದಲ್ಲಿ ನೀವು ಇದು ನಾಳೆಗೆ action plan ಆಗುತ್ತದೆ ಎಂದರೆ, ಆಗ ಅವರಿಗೆ ಮನೆ ಕಟ್ಟುವುದಕ್ಕೆ ಅವಕಾಶವಾಗುವುದಿಲ್ಲ. ಅದಕ್ಕೆ ಏನು ಮಾಡುತ್ತೀರಿ? ಅವರನ್ನು ಏನಾದರೂ accommodate ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದನ್ನು ಯೋಚನೆ ಮಾಡಿ. ಇನ್ನೊಂದು ಮಾನ್ಯ ಅಧ್ಯಕ್ಷರೆ, ಇವತ್ತು ನಾನು ಮುಖ್ಯವಾಗಿ ಗ್ರಾಮೀಣ ಪ್ರದೇಶದ ವಿಚಾರದಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆ. ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ಕರ್ನಾಟಕ ರಾಜ್ಯದಲ್ಲಿ 4 ವರ್ಷದಿಂದ ಗ್ರಾಮಾಂತರ ಪಟ್ಟಣ ಪ್ರದೇಶಗಳಲ್ಲಿ ಗುರುತಿಸಿರುವ ನಿವೇಶನ ರಹಿತರ ಸಂಖ್ಯೆ ಎಷ್ಟು? ಇವುಗಳಲ್ಲಿ ಇದುವರೆಗೂ ನಿವೇಶನ ನೀಡಿರುವ ಸಂಖ್ಯೆ ಎಷ್ಟು? ಯಾವ್ಯಾವ ಕಾನೂನಿನ ಅಡಿಯಲ್ಲಿ ನಿವೇಶನಗಳನ್ನು ಕೊಟ್ಟಿದ್ದೀರಿ ಎಂದು ಕೇಳಿದ್ದೇನೆ. 2003 ರಲ್ಲಿ ಸಮೀಕ್ಷೆಗೊಂಡ ಪ್ರಕಾರ, ನಗರ ಪ್ರದೇಶದಲ್ಲಿ 2,55,827 ನಿವೇಶನಗಳು, ಗ್ರಾಮೀಣ ಪ್ರದೇಶದಲ್ಲಿ 10,42,986 ನಿವೇಶನಗಳು. ಅಂದರೆ ಇಲ್ಲಿಯವರೆಗೆ 4 ವರ್ಷದಲ್ಲಿ ಕೊಟ್ಟಿರುವ ಸೈಟುಗಳು ಎಷ್ಟೆಂದರೆ, ಕೇವಲ 88,828. ಇದು ಎಲ್ಲಿಗೆ ಎಲ್ಲಿಂದ ಸಂಬಂಧ? 4 ವರ್ಷದಿಂದ ನೀವು 88,828 ಸೈಟುಗಳನ್ನು ಕೊಟ್ಟಿದ್ದೀರಿ. ನೀವು ಕೊಟ್ಟಿರುವ ಬಸವ, ಇಂದಿರಾ ಆವಾಸ್ ಯೋಜನೆಯಲ್ಲಿ ಏಕೆ ಖರ್ಚಾಗುತ್ತಿಲ್ಲ? ಯಾರೂ ಕಟ್ಟುವುದಕ್ಕೆ

ಆಗುತ್ತಿಲ್ಲವೆಂದರೆ, ಇದೇ ಕಾರಣ. ಮೂಲತಃ ನಾನು ಹೇಳುತ್ತಿರುವುದು ನೀವು 1994 amendment ತರತಕ್ಕಂಥದ್ದು ಒಂದು ಕಡೆ ಆಗುತ್ತದೆ. ಆದರೆ you are solving only problems of 5%. ಶೇಕಡ 95 ರಷ್ಟು ನಿವೇಶನ ಇಲ್ಲದೇ ಇರತಕ್ಕಂಥವರ ಸಂಖ್ಯೆ 95% ರಷ್ಟು ಇದೆ. ಅದಕ್ಕೆ ಮಾನ್ಯ ಸೋಮಣ್ಣನವರಿಗೂ ಮೊನ್ನೆ ಯಾವುದೋ ಸಂದರ್ಭದಲ್ಲಿ ನಾನು ಹೇಳಿದೆ. ದಯಮಾಡಿ ನಾನು ಹೇಳುತ್ತೇನೆ. ದೇವರಾಜ್ ಅರಸುರವರು ಮುಖ್ಯಮಂತ್ರಿ ಗಳಾಗಿದ್ದ ಸಂದರ್ಭದಲ್ಲಿ ನಿವೇಶನ ಇಲ್ಲದೇ ಇರತಕ್ಕಂಥವರಿಗೆ ನಿವೇಶನ ಕೊಡತಕ್ಕಂಥದ್ದು ಆದ್ಯತೆ ಕಾರ್ಯಕ್ರಮವಾಗಿತ್ತು. As a 20-point programme ನಲ್ಲಿ ಬರುತ್ತಿತ್ತು. ಆಗ ಅವರು ಏನು ಮಾಡುತ್ತಿದ್ದರೆಂದರೆ, Houseless, siteless Act ಗೆ, ಅಂದರೆ ನಿವೇಶನ ಕೊಡುವುದಕ್ಕೆ ಒಂದು Act ಅನ್ನು ತಂದಿದ್ದರು. ನಾವು Act ಅನ್ನು repeal ಮಾಡಿ ಎರಡು ವರ್ಷ ವಾಯಿತು. ಅದನ್ನು replace ಮಾಡಲು ಏನಾದರೂ Act ತಂದಿದ್ದೇವೆಯೇ? ಏನೂ ಇಲ್ಲ. ಇವತ್ತು ಕಾನೂನು ಇರುವುದು ಏನು? ನಮ್ಮಲ್ಲಿ ಇವತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ. ಮೊದಲು ಆಶ್ರಯ ಸಮಿತಿ ಎಂದು ಇತ್ತು. ನಾನು ಆಶ್ರಯ ಸಮಿತಿಯ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಒಂದೊಂದು ವರ್ಷಕ್ಕೆ ನಾನು ಒಂದು ಅವಧಿಯಲ್ಲಿ 10,000–15,000 ಸೈಟುಗಳನ್ನು ಕೊಡುತ್ತಿದ್ದೆ. ಆದರೆ ಇವತ್ತು ಒಂದು ಸೈಟು ಕೊಡುವುದಕ್ಕೆ ಆಗುತ್ತಿಲ್ಲ. ಕಾರಣ ವೇನೆಂದರೆ, ನಮ್ಮ ಬೇಲೂರು Declaration ಆದ ಮೇಲೆ ಗ್ರಾಮ ಪಂಚಾಯಿತಿಗೆ ಅಧಿಕಾರ ವರ್ಗಾವಣೆಯಾದ ಮೇಲೆ ಆಶ್ರಯ ಸಮಿತಿಗಳು rural ನಲ್ಲಿ ಇಲ್ಲ. ಆದ್ದರಿಂದ ನಿವೇಶನಗಳನ್ನು ಕೊಡುವುದಕ್ಕೆ ಆಗುವುದಿಲ್ಲ. ಗ್ರಾಮ ಪಂಚಾಯಿತಿಯವರಿಗೆ ನಿವೇಶನಗಳನ್ನು ಮಾಡತಕ್ಕಂಥ ಅಧಿಕಾರವಿದೆ. ನೀವು ಗ್ರಾಮೀಣಾಭಿವೃದ್ಧಿ ಸಚಿವರು. ಒಂದೇ ಒಂದು ಗ್ರಾಮೀಣ ಪ್ರದೇಶದಲ್ಲಿ ಒಂದೇ ಒಂದು ನಿವೇಶನವನ್ನು ಕೊಡಲು ಆಗುತ್ತಿಲ್ಲ. ಕಾರಣ, ಸ್ಥಳೀಯ ವಾದಂತಹ ರಾಜಕಾರಣ ಮತ್ತು ಅಲ್ಲಿ ಜಾಗದ ಕೊರತೆ ಇದೆ. ಇವೆಲ್ಲವುಗಳ ಹಿನ್ನೆಲೆಯಲ್ಲಿ ನೀವು ಕೊಡುವುದಕ್ಕೆ ಆಗುತ್ತಿಲ್ಲ. ಅದಕ್ಕೆ ನಾನು ಹೇಳುವುದೇ ನೆಂದರೆ, ನಾನು ಈಗ ಕೊಟ್ಟು ಅಂಕಿ–ಅಂಶ, 2003 ರಲ್ಲಿ 12 ಲಕ್ಷ ನಿವೇಶನದಾರರನ್ನು ಗುರುತಿಸಿ, ಇವತ್ತು ನೀವು ಕೊಟ್ಟಿರುವುದು 88,000 ಎಂದರೆ, ಈ ಅಜಗಜಾಂತರ ವ್ಯತ್ಯಾಸ ಇರುವುದರಿಂದ ಈ ವರ್ಷ ಏನಾದರೂ ಮಾರ್ಪಾಟು ಮಾಡಿ, ಆಶ್ರಯ ಸಮಿತಿಗಳನ್ನು ಮಾಡತಕ್ಕಂಥ

ರೀತಿಯಲ್ಲಿ, to oversee this Vigilance Committee ಎಂದು ಮಾಡಿದ್ದೀರಿ. Vigilance Committeeಗೆ ಏನೂ ಅಧಿಕಾರವಿಲ್ಲ. ಪ್ರಯೋಜನವಾಗುವುದಿಲ್ಲ. ನೀವು ಒಂದು ಸಮಿತಿಯನ್ನು ಮಾಡಿ, ನಿವೇಶನಗಳನ್ನು ಗುರುತಿಸುವಂತಹ ಕಾರ್ಯಕ್ರಮಗಳನ್ನು ಜರೂರಾಗಿ ಮಾಡತಕ್ಕಂಥ ರೀತಿಯಲ್ಲಿ ಅವಕಾಶವಾಗುತ್ತದೆ. ಆಶ್ರಯ ಸಮಿತಿಗಳನ್ನು ಪುನರ್ ಸ್ಥಾಪನೆ ಮಾಡಲು ಆಗುವುದೇ ಇಲ್ಲ ಎನ್ನುವ ಮಟ್ಟಕ್ಕೆ ಬಂದರೆ, ನಾನು ಒಂದೇ ಒಂದು ಸಲಹೆಯನ್ನು ಕೊಡುತ್ತೇನೆ. ಮಾನ್ಯ ಅಧ್ಯಕ್ಷರೆ, ತಾವು ಹೇಳಿದಿರಿ, Deputy Commissioners ಗೆ ಅಧಿಕಾರ ಇದೆ. ಗ್ರಾಮ ಪಂಚಾಯಿತಿಯಿಂದ Proposal ಬಂದು Chief Secretary ಯವರು D.C ಗೆ ಕಳುಹಿಸಿ ಕೊಡುವಷ್ಟರಲ್ಲಿ guidance value 3 times ಜಾಸ್ತಿ ಆಗಿದೆ.

ಅಧ್ಯಕ್ಷರು : 94(C) ನಲ್ಲಿ D.C. application. . . . .

ಶ್ರೀ ಟಿ.ಬಿ. ಜಯಚಂದ್ರ : ಇದಕ್ಕೂ ಅದಕ್ಕೂ ಸಂಬಂಧವಿಲ್ಲ. 94 (C) ಗೆ ತರತಕ್ಕಂಥ ಉದ್ದೇಶವೇನೆಂದರೆ, ಮನೆ ಕಟ್ಟುವುದಕ್ಕೆ ಪ್ರಯತ್ನ ಪಟ್ಟವರಿಗೆ ಸಹಾಯ ಮಾಡುವುದರ ಜೊತೆಗೆ.....

ಅಧ್ಯಕ್ಷರು : No, no, D.C ಯವರಿಗೆ application ಹಾಕಿದರೆ, he will grant site. ಅದೇ ರೀತಿ ಇರುವುದು. ಹಿಂದೆ ಇದ್ದಿದ್ದು ಅದೇ ರೀತಿ.

ಶ್ರೀ ಟಿ.ಬಿ. ಜಯಚಂದ್ರ : ಅಲ್ಲ. 94 (C) ಬೇರೆ. ನೀವು ಗ್ರಾಮೀಣಾಭಿವೃದ್ಧಿ ಸಚಿವರೂ ಆಗಿರುವುದರಿಂದ ಗ್ರಾಮೀಣ ಪ್ರದೇಶದ ನಿವೇಶನ ರಹಿತರ ಸಮಸ್ಯೆಯನ್ನು ಬಗೆಹರಿಸಬೇಕಲ್ಲವೇ? ಆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಯಾವುದೇ ರೀತಿಯಾದಂತಹ ಕಾನೂನು ಇಲ್ಲ.

ಅಧ್ಯಕ್ಷರು : ಅಲ್ಲೇ ಮನೆ ಕಟ್ಟಿಕೊಳ್ಳಬಹುದಲ್ಲವೇ?

ಶ್ರೀ ಟಿ.ಬಿ. ಜಯಚಂದ್ರ : ಪ್ರತಿ ಸಂದರ್ಭದಲ್ಲಿಯೂ ಇದನ್ನು ಹೇಳುತ್ತೇನೆ, ಮಾನ್ಯ ಅಧ್ಯಕ್ಷರೆ, ಅದು ಏನು ಸರ್ಕಾರದ ಕಿವಿಗೇ ಹೋಗುವುದಿಲ್ಲವೋ, ಮಾನ್ಯ ಮಂತ್ರಿಗಳ ಕಿವಿಗೆ ಹೋಗುವುದಿಲ್ಲವೋ ನನಗಂತೂ ಅರ್ಥವಾಗಿಲ್ಲ. ದಯಮಾಡಿ ಇದರ ಬಗ್ಗೆ ಯೋಚನೆ ಮಾಡಿ. ನಾನು ನನ್ನ ಕ್ಷೇತ್ರದ ಒಂದು ವಿಚಾರ ಹೇಳಿಬಿಡುತ್ತೇನೆ. ನನ್ನ ಕ್ಷೇತ್ರದಲ್ಲಿ ಸುಮಾರು 300 ಎಕರೆ ಜಾಗವನ್ನು ಸರ್ಕಾರಿ ಜಮೀನಿನಲ್ಲಿ ಕೊಡುವುದಕ್ಕೆ ಅವಕಾಶ ಇದೆ. ಮಾನ್ಯ ಈಶ್ವರಪ್ಪನವರೆ, ಊರಿನ ಪಕ್ಕದಲ್ಲಿ ಜಾಗ ಇರುತ್ತದೆ. ಅದನ್ನು

ಗೋಮಾಳ ಎಂದು ಹೇಳುತ್ತಾರೆ, ಖರಾಬು ಎಂದು ಹೇಳುತ್ತಾರೆ ಅಥವಾ ಶೇಂದಿವನ ಎಂದು ಹೇಳುತ್ತಾರೆ. ಈ ರೀತಿ ಇರುವಾಗ, ಗೋಮಾಳ ಎಂದರೆ, Revenue Department ನ ಕಾನೂನು ಪ್ರಕಾರ ಕೊಡುವುದಕ್ಕೆ ಬರುವುದಿಲ್ಲ. ಖರಾಬ್ ಎಂದರೆ ಕೊಡುವುದಿಲ್ಲ. ಈ ರೀತಿಯಾಗಿ ಮಾಡಿ ನಿವೇಶನ ಕೊಡುವುದನ್ನೂ ನಿಲ್ಲಿಸುತ್ತಾರೆ. ಅಲ್ಲಿ ಗೋಮಾಳ ಇದ್ದರೆ ಅಲ್ಲಿ ದನಗಳು ಯಾವ್ಯಾವು ಮೇಯುವುದಿಲ್ಲ. ಊರಿನ ಪಕ್ಕದಲ್ಲಿ 1–2 ಎಕರೆ ಇರುತ್ತದೆ. ಅಲ್ಲಿ ಕೊಡುವುದಕ್ಕೂ ತಕರಾರು ಮಾಡುತ್ತಾರೆ. ಅದಕ್ಕೆ ನಾನು ನಮ್ಮ ಕ್ಷೇತ್ರದ ಸಮಸ್ಯೆಗೋಸ್ಕರ ನಿಮ್ಮ Principal Secretary ಯವರ ಜೊತೆ ಚರ್ಚೆ ಮಾಡಲು ನಾಳಿದ್ದು ಮೀಟಿಂಗ್‌ಗೆ ಅವರನ್ನು ಕರೆದಿದ್ದೇನೆ. 300 ಎಕರೆ ಜಮೀನು ಲಭ್ಯ ಇದೆ. ಇವತ್ತು ನಿವೇಶನಗಳನ್ನು ಕೊಡಬಹುದು. ಆದರೆ ಕೊಡುವುದಕ್ಕೆ ಆಗುತ್ತಿಲ್ಲ, ಕಾನೂನು ಇಲ್ಲ. ಅದಕ್ಕಾಗಿ ನಾನು ಹೇಳುವುದೇನೆಂದರೆ, ಕಾನೂನಿನ ಬಗ್ಗೆ ತಾವು ಗ್ರಾಮೀಣ ಪ್ರದೇಶದ ಕಳಕಳಿ ಇಟ್ಟುಕೊಂಡು ದಯಮಾಡಿ ಆ ರೀತಿ ವಿಶೇಷವಾದಂತಹ ಕಾನೂನು ತರುವಂತಹ ಕೆಲಸ ಮಾಡಿ. ಈಗ ತಾವು ಏನು 94(C) ಗೆ amendment ತಂದಿದ್ದೀರಿ, ಅದನ್ನು ನಾವು ಸ್ವಾಗತ ಮಾಡಬಹುದು. ಅದರಲ್ಲಿ ಏನೂ ಇಲ್ಲ.

94ಸಿ ಗೆ ನೀವು ಏನು amendment ತಂದಿದ್ದೀರಿ, ಅದನ್ನು ನಾವು ಸ್ವಾಗತ ಮಾಡಬಹುದು. ಅದರ ಜೊತೆಯಲ್ಲಿ 1998 ಕ್ಕಿಂತ ಮುಂಚೆ ಒಂದು ಪ್ರಶ್ನೆ ಬರುತ್ತದೆ, 1998 ರಲ್ಲಿ ಎಷ್ಟು applications pending ಇದ್ದವು? ಎಷ್ಟು regularise ಆದವು, ಈಗ ಇಲ್ಲಿಯವರೆಗೂ ಅಂದರೆ 14 ವರ್ಷದ ನಂತರ, ಈ 14 ವರ್ಷಗಳಲ್ಲಿ unauthorised ಆಗಿ ಸರ್ಕಾರಿ ಜಮೀನಿನಲ್ಲಿ ಕಟ್ಟಿರುವ ಎಲ್ಲವನ್ನು ಕೂಡಾ ನೀವು regularise ಮಾಡುತ್ತೀರಾ? ಆ ಒಂದು ವಿಚಾರದ ಬಗ್ಗೆ ಹೇಳಬೇಕು. ಕೊನೆಯದಾಗಿ ನಾನು ಒಂದು ಸಲಹೆ ಕೊಡುವುದೇನೆಂದರೆ ನೀವು ಯಾವುದೇ ಕಾರಣದಲ್ಲೂ ಕೂಡ ಒಂದು Provision ಮಾಡಿ, suppose ಏನಾದರೂ ಸರ್ಕಾರಿ ಜಮೀನು, ಒತ್ತುವರಿ ವಿಚಾರದಲ್ಲಿ ಗಲಾಟೆ ಇರುತ್ತದೆ, ಅಥವಾ ಇನ್ನೊಂದೇನೋ ಇರುತ್ತದೆ, ಕೋರ್ಟ್‌ನಲ್ಲಿ dispute ಇದ್ದಂಥ ಸಂದರ್ಭದಲ್ಲಿ ಯಾವುದೇ ಕಾರಣದಲ್ಲೂ ಕೊಡುವಂಥ ಕೆಲಸ ಮಾಡಬೇಡಿ, not-withstanding anything ಅಂತ ಇದೆಯಲ್ಲ ಅಲ್ಲಿ ಎಲ್ಲಾದರೂ ಒಂದು ಕಡೆ ಕೋರ್ಟ್‌ನಲ್ಲಿದ್ದರೆ ಇದಕ್ಕೆ

ಸಂಬಂಧ ಬರುವುದಿಲ್ಲ ಎಂದು amendment ತರುವಂಥ ಕೆಲಸ ಮಾಡಿದರೆ ಒಳ್ಳೆಯದು. ಕೋರ್ಟ್‌ನಲ್ಲಿದ್ದರೆ, ಯಾರೋ ಅನುಭವದಲ್ಲಿರುತ್ತಾರೆ, ಹಕ್ಕು ಯಾರಿಗೋ ಒಬ್ಬರಿಗೆ ತೀರ್ಮಾನ ನಾಳೆ ಆಗುತ್ತದೆ. ಅಂಥ ಸಂದರ್ಭದಲ್ಲಿ ಕೋರ್ಟ್‌ನಲ್ಲಿ dispute ಇದ್ದಾಗ ಅದನ್ನು ತರುವುದು ಬೇಡ, ಅಂಥವು ಗಳನ್ನು regularize ಮಾಡುವುದು ಬೇಡ ಎನ್ನುವ clause ನ್ನು ಸೇರಿಸಿದರೆ I think it is more than enough.

ಅಧ್ಯಕ್ಷರು : ಎಲ್ಲರೂ ಎದ್ದು ನಿಂತರೆ ಹೇಗೆ? ಆಮೇಲೆ ಮಾತನಾಡಿ, ಅವಕಾಶ ಕೊಡುತ್ತೇನೆ. ಚರ್ಚೆ ಮಾಡಬೇಕು.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಕಂದಾಯ ಸಚಿವರು 94ಸಿ ಗೆ ಏನು ತಿದ್ದುಪಡಿ ತಂದಿದ್ದಾರೆ, ಇದನ್ನು ಮಾಡುತ್ತಿರುವಂಥ ಉದ್ದೇಶ ಗ್ರಾಮೀಣ ಪ್ರದೇಶದಲ್ಲಿ ಅನಧಿಕೃತವಾಗಿ ಕಟ್ಟಿಕೊಂಡಿರುವ ಮನೆಗಳನ್ನು ಅಧಿಕೃತಗೊಳಿಸುವುದು. ಅದರ extent 2400 ಚದರ ಅಡಿಗಿಂತ ಹೆಚ್ಚಾಗಿ ಇರಬಾರದು. ಅದರ ಒಳಗಡೆ ಇರುವಂಥವರಿಗೆ ಅವರು ಅನಧಿಕೃತವಾಗಿ ಮನೆಗಳನ್ನು ಕಟ್ಟಿಕೊಂಡಿದ್ದರೆ, ಅದನ್ನು ಸಕ್ರಮ ಗೊಳಿಸಿಕೊಡಬೇಕು ಎಂದು ಮಾಡುತ್ತಿದ್ದಾರೆ. ಅದು ಏನು ಹೇಳಿದ್ದಾರೆ ಎಂದರೆ; (vii) no land shall be granted where construction of dwelling house in occupied land;

(a) lies in the line of natural drains or course of valley;

ಇವೆಲ್ಲ ಇದ್ದರೆ ಮಾಡಬಾರದು ಎಂದು ಹೇಳುತ್ತಾರೆ. Forest land ಆದರೂ ಇಲ್ಲ ಎಂದು ಹೇಳುತ್ತಾರೆ. Forest land ಆದರೆ ಮಾಡುವಂತಿಲ್ಲ, it is only a Government land, Revenue land ಆಗಬೇಕು, ಈಗ ಮಲೆನಾಡು ಪ್ರದೇಶಗಳಲ್ಲೆಲ್ಲಾ forest land ಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರಲ್ಲ, ಅವರಿಗೆ ಏನು ಮಾಡುತ್ತೀರಿ?

ಶ್ರೀ ಅಭಯಚಂದ್ರ ಜೈನ್ : Deemed forest ನಲ್ಲಿ,

ಶ್ರೀ ಸಿದ್ದರಾಮಯ್ಯ : ಅಲ್ಲೆಲ್ಲ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಅವರಿಗೆ ಅದನ್ನು ಬಿಟ್ಟರೆ ಬೇರೆ ಸರ್ಕಾರಿ ಲ್ಯಾಂಡ್ ಇರುವುದಿಲ್ಲ, ಅವರಿಗೆ ಏನು ಪರಿಹಾರ ಕೊಡುತ್ತೀರಿ?

ಅಧ್ಯಕ್ಷರು : ST ಆದರೆ Forest Dwellers Act ನಲ್ಲಿ ಅವಕಾಶವಿದೆ.

ಶ್ರೀ ಸಿದ್ದರಾಮಯ್ಯ : ಬೇರೆಯವರಾದರೆ ಏನು ಮಾಡಬೇಕು?

ಅಧ್ಯಕ್ಷರು : ಬೇರೆಯವರಾದರೆ ಸ್ವಲ್ಪ ಲ್ಯಾಂಡ್ ಎಲ್ಲಾ ವಾಪಸ್ಸು ತೆಗೆದುಕೊಳ್ಳಬೇಕು. Revenue land ಆದರೆ......

ಶ್ರೀ ಸಿದ್ದರಾಮಯ್ಯ : ಆ ತರಹ ಏನಾದರೂ ಯೋಚನೆ ಮಾಡಿದ್ದೀರಾ? Forest Act ಗೆ amendment ತರುವುದಕ್ಕೆ ಏನಾದರೂ ಯೋಚನೆ ಮಾಡಿದ್ದೀರಾ? ಗ್ರಾಮೀಣ ಪ್ರದೇಶದಲ್ಲಿ, ಮೊನ್ನೆ ನಾನು ಕುಮಟಾಗೆ ಹೋಗಿದ್ದೆ.....

ಅಧ್ಯಕ್ಷರು : Revenue land ಅನ್ನು forest ಗೆ land bank ಮರ ಬೆಳೆಸುವುದಕ್ಕೆ ಕೊಟ್ಟಿದ್ದಾರೆ, with a condition at any time it can be taken back ವಾಪಸ್ಸು ತೆಗೆದುಕೊಂಡರೆ ಆಯಿತು. ಸಮಸ್ಯೆ ಇತ್ಯರ್ಥ ಆಗುತ್ತದೆ.

ಶ್ರೀ ಸಿದ್ದರಾಮಯ್ಯ : ಇತ್ಯರ್ಥ ಆಗುತ್ತಾ?

ಅಧ್ಯಕ್ಷರು : ಹೌದು, ವಾಪಸ್ಸು ತೆಗೆದುಕೊಳ್ಳಬೇಕು, ಸ್ವಲ್ಪ ಇಚ್ಛಾ ಶಕ್ತಿ ಬೇಕು. ಅಧಿಕಾರಿಗಳು ಹೇಳಿದ ಹಾಗೆ ಕೇಳಿದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಅದೆಲ್ಲ ಆಗುವುದಿಲ್ಲ ಇವರಿಗೆ,

ಶ್ರೀ ಅಭಯಚಂದ್ರ ಜೈನ್ : ಮಲೆನಾಡಿನ ಜ್ವಲಂತ ಸಮಸ್ಯೆ ಇದು.

ಶ್ರೀ ಸಿದ್ದರಾಮಯ್ಯ : ಇದು ಮಲೆನಾಡಿನಲ್ಲಿ, ನಾನು ಮೊನ್ನೆ ಕುಮಟಾಗೆ ಹೋಗಿದ್ದೆ, ಅಲ್ಲಿ ಜನ ಈ ಸಮಸ್ಯೆಯನ್ನು ಪ್ರಸ್ತಾಪ ಮಾಡಿದರು. ಮಂತ್ರಿಗಳೇ, ಆದ್ದರಿಂದ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಅದರ ಬಗ್ಗೆ ಸ್ವಲ್ಪ ಗಂಭೀರವಾಗಿ ಯೋಚನೆ ಮಾಡಬೇಕು. ಆಮೇಲೆ ನೀವು Town Panchayathಗಳಿಂದ 3.ಕಿ.ಮೀ. ಆಚೆಗೆ ಎಂದು ಹೇಳಿದ್ದೀರಿ, ಉದಾಹರಣೆಗೆ ನಮ್ಮ ಟಿ.ನರಸೀಪುರ ಟೌನ್ ಪಂಚಾಯತ್, ಆ ಭೈರಾಪುರ ಗ್ರಾಮ ಪಂಚಾಯತಿ ಮತ್ತೆ ಅಲಗೋಡು ಗ್ರಾಮ ಪಂಚಾಯತಿ ಎರಡೂ ಅಲ್ಲಿಗೆ attach ಆಗಿದ್ದಾವೆ. ಇವರಿಗೆ ಏನು ಮಾಡುವುದು ? They are village panchayats. ಪಂಚಾಯತಿ ಎಲೆಕ್ಷನ್ಸ್ ನಡೆದಿವೆ, ಅದು ಪಂಚಾಯತ್ Act ನಲ್ಲಿ ಬರುತ್ತದೆ. ಆದರೆ 2 ನರಸೀಪುರ ರಸ್ತೆಯಿಂದ ಮೇಲಕ್ಕೆ ಭೈರಾಪುರ,

ಕೆಳಗಡೆಗೆ ಟಿ. ನರಸೀಪುರ, ಆ ಕಡೆ ಇನ್ನು ಒಂದು ರೋಡ್‌ನಿಂದ ಬಸ್ ಸ್ಟ್ಯಾಂಡ್‌ನಿಂದ ಆ ಕಡೆಗೆ ಭೈರಾಪುರ, ಅಲ್ಲಿಂದ 1 ಫರ್ಲಾಂಗ್ ಹೋದರೆ ಅಲಗೂಡು ಪಂಚಾಯತಿ. ಇವರಿಗೆ ಏನು ಪರಿಹಾರ ಕೊಡುವುದಕ್ಕೆ ಆಗುತ್ತದಾ? ಆದ್ದರಿಂದ ನನ್ನ ಪ್ರಕಾರ Town Panchayath ಗಳನ್ನು ಬಿಟ್ಟು ಬಿಡುವುದು ಒಳ್ಳೆಯದು. ಇಲ್ಲಿಗೆ ಡಿಗ್ರಿ ಮಾಡದೆನೇ, ನೋಡಿ ಸ್ವಲ್ಪ ಯೋಚನೆ ಮಾಡಿ ಈಶ್ವರಪ್ಪನವರೇ, ನಾನು ಒಂದೇ ಉದಾಹರಣೆಗೆ ಟಿ. ನರಸೀಪುರದ್ದು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : Town Panchayath ಮಾಡೋಣ. CMC ಬೇಡ, ಬೇಕಾದರೆ ಬೇರೆ ವಿಚಾರಗಳಿಗೆ ಇನ್ನೊಮ್ಮೆ examine ಮಾಡಲಿ.

ಅಧ್ಯಕ್ಷರು : Town Panchayath ಸಾಕು.

ಶ್ರೀ ಬಂಡೆಪ್ಪ ಕಾಶೆಂಪೂರ್ : ಇದರಲ್ಲಿ Town Panchayath ಇಲ್ಲ, CMC ಅಷ್ಟೇ ಇದೆ.

ಶ್ರೀ ಸಿದ್ದರಾಮಯ್ಯ : ನೋಡಿ, Town Panchayath ಇದೆ ನೋಡಿ.

(Vib) For other Municipal Corporations under the Karnataka Municipal Corporation Act, 1976, the outer limits of 10 Kms. Shall apply; ಎಂದು ಇದೆ.

(vic) The unauthorised buildings lying within the limits of 3 Kms. From the outer periphery of TMCs and Town Panchayats shall not be regularised. So ಅದಕ್ಕೆ ಈ Town Panchayath shall not be regularized ಗಳನ್ನು ಬಿಟ್ಟು ಬಿಡುವುದು ಒಳ್ಳೆಯದು. ಇಲ್ಲದಿದ್ದರೆ ಮಹದೇವಪ್ಪನವರೇ, ಭೈರಾಪುರ ಪಂಚಾಯತಿ ಯಲ್ಲಿ ಅವರ್‍ಯಾರೋ ಪಕ್ಕದಲ್ಲಿ Government land ನಲ್ಲಿ ಕಟ್ಟಿಕೊಂಡಿ ದ್ದಾರಲ್ಲ, ಅವರಿಗೆ ಬರುವುದಿಲ್ಲ ಇದು. ಅಲಗೋಡುನವರಿಗೂ ಬರುವುದಿಲ್ಲ. ಅದಕ್ಕಾಗಿಯೇ ನಾವು Municipality ಗಳಿಗೆ ಮಾಡಿ ಎಂದರೆ ಅದನ್ನು ಕೇಳುವುದಿಲ್ಲ ಇವರು. ಅವೆಲ್ಲಾ attach ಆಗಿದ್ದಾವೆ, ಸದ್ಯಕ್ಕೆ ಟೌನ್ ಪಂಚಾಯಿತಿ ಬಿಟ್ಟು ಬಿಡುವುದು ಒಳ್ಳೆಯದು. ಆಮೇಲೆ ಮುಂದಕ್ಕೆ ನೋಡೋಣ. ಅದರಲ್ಲಿ ಈ ಟೌನ್ ಪಂಚಾಯಿತಿಯನ್ನು ಅದರೊಳಗಡೆ ಸೇರಿಸಿಕೊಳ್ಳಿ. ಅದನ್ನು ಮಾಡಿದರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಬಹಳಷ್ಟು ಪಂಚಾಯಿತಿಗಳು 10 ಕಿ.ಮೀ. ಒಳಗಡೆ ಬರುತ್ತವೆ.

ಶ್ರೀ ಸಿದ್ದರಾಮಯ್ಯ : ಒಂದು forest land ನಲ್ಲಿರುವಂಥದ್ದರ ಬಗ್ಗೆ ಯೋಚನೆ ಮಾಡಬೇಕು. ಇನ್ನೊಂದು Town Panchayaths ನ್ನು ಮಾಡಬೇಕು. ಮತ್ತೆ ಬಹಳ multi-storised building ಗಳನ್ನು ಕಟ್ಟಿಕೊಂಡಿದ್ದರೆ ಅವೆಲ್ಲಾ ಇಲ್ಲ. ಈಗ ನೀವು ಏನು ಹೇಳಿದ್ದೀರಿ, ಆಶ್ರಯ ಮನೆಗಳಿಗೆ ಏನು conditions ಬರುತ್ತವೆ, ಅವೆಲ್ಲವನ್ನು follow ಮಾಡಬೇಕು ಎಂದು ಇದ್ದೀರಿ. That has to be adopted.

ಶ್ರೀ ಬಂಡೆಪ್ಪ ಖಾಶೆಂಪೂರ್ : ಮಾನ್ಯ ಅಧ್ಯಕ್ಷರೆ, ಏನು ಒಂದು ಸನ್ಮಾನ್ಯ ಕಂದಾಯ ಸಚಿವರು, ಉಪಮುಖ್ಯಮಂತ್ರಿಗಳು ಬಿಲ್ಲನ್ನು ತಂದಿದ್ದಾರೆ, ಇದು ಬಹಳ ಒಳ್ಳೆಯ ವಿಚಾರವಿದೆ. ಆದರೆ, ವಿರೋಧ ಪಕ್ಷದ ನಾಯಕರು ಹೇಳಿದರು, ಏನೆಂದರೆ 94ಸಿ ಬಿಟ್ಟು, ಶ್ರೀ ಜಯಚಂದ್ರರವರು ಮಾತನಾಡುವಾಗ ಘೂಟ್ ಖರಾಬು, ನಾಲಾ ಕುಂಟೆ ಇವೆಲ್ಲವಕ್ಕೂ 68/1 ಸೆಕ್ಷನ್‌ನಲ್ಲಿ ಸಕ್ರಮ ಮಾಡುವುದಕ್ಕೆ ಅನುಮತಿ ಕೊಡಬೇಕು. ಆಯಾ ಡಿ.ಸಿ.ಗಳಿಗೆ ಕೊಟ್ಟುಬಿಡಿ, ಇಲ್ಲದಿದ್ದರೆ ಪೂರಾ ತಿರುಗಿಕೊಂಡು ಬರಬೇಕೆಂದರೆ 6 ತಿಂಗಳುಗಳು ಬೇಕಾಗುತ್ತದೆ. ಅದನ್ನು ಇದರಲ್ಲಿ ಸ್ವಲ್ಪ ಅಳವಡಿಸಿ, ಏಕೆಂದರೆ ಬಹಳಷ್ಟು ಮನೆಗಳು ಅಲ್ಲಿವೆ. ಆಮೇಲೆ, ವಿಶೇಷವಾಗಿ even CMC limit ಆಗಿದೆ, ಈಗ ನಮ್ಮದೇ ಬೀದರ್, CMC limit ನಿಂದ hardly ಎರಡು-ಎರಡೂವರೆ ಕಿ.ಮೀ.ಗೆ ಅಷ್ಟೂರ್ ಎಂದು ಒಂದು ಪಂಚಾಯತಿ ಇದೆ. ಪಕ್ಕದಲ್ಲಿ ಅಮಲಾಪುರ ಪಂಚಾಯತಿ ಇದೆ, 1 ಕಿ.ಮೀ. ಸಹ ಆಗುವುದಿಲ್ಲ. ಸನ್ಮಾನ್ಯ ಮಂತ್ರಿಗಳೇ CMC limit, not even TMC, ಅವೆಲ್ಲಾ ಇನ್ನೂ ಪಂಚಾಯಿತಿ ಲಿಮಿಟಿನಲ್ಲಿವೆ. ಅದಕ್ಕೆ ತಾವು ಪಂಚಾಯಿತಿ ಲಿಮಿಟ್‌ನಲ್ಲಿ ಯಾವುದು ಬರುತ್ತವೋ, ಅವರ jurisdiction ಅದಕ್ಕೆ area limit ಕೊಡಬೇಡಿ, either may be CMC or TMC. ಇದನ್ನು ಮಾಡುವುದು ಸೂಕ್ತ, ಏಕೆಂದರೆ ಅದು ಪಂಚಾಯಿತಿ ಲಿಮಿಟ್‌ನಲ್ಲಿ ಬರುತ್ತದೆ. ನಮ್ಮಲ್ಲಿ ಬಹಳಷ್ಟು ಪಂಚಾಯಿತಿಗಳು ಅಕ್ಕಪಕ್ಕದಲ್ಲಿವೆ. ಆಮೇಲೆ ಇನ್ನೊಂದು ಫಾರೆಸ್ಟ್ ಎಂದು ಹೇಳಿದರು, ನಮ್ಮ ಕಡೆ ಎಲ್ಲಾ social forestry ನಲ್ಲಿ, ಕೆಲವು reserve forest ನಲ್ಲಿ ಬೇಡ, ಇದಕ್ಕೆ Central Government ನಿಂದ

ಬಹಳಷ್ಟು restrictions ಇವೆ, Social forest ನಲ್ಲಿ ಕೆಲವು occupations ಇವೆ, occupied ಮನೆಗಳಿವೆ, ಅಂಥದ್ದಕ್ಕೆ ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬೇರೆ ಕಡೆ ಲ್ಯಾಂಡ್ ತೆಗೆದುಕೊಂಡು ಅದಕ್ಕೆ ಕೊಡುವ provision ಇದೆ. ಅದರ ಬಗ್ಗೆಯೂ ಸಹ ಈ ಬಿಲ್‌ನಲ್ಲಿ consider ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಆಮೇಲೆ ಈ rate ಏನು ಎಂದು specify ಮಾಡಿಲ್ಲ. ಏಕೆಂದರೆ, 2400 ಅಡಿ ಅದಕ್ಕಿಂತ ಕಡಿಮೆ ಎಂದು ಹೇಳಿದ್ದೀರಿ. Rate ಅನ್ನು ಅಲ್ಲಿಯ D.C. ಗಳು fix ಮಾಡುತ್ತಾರೋ ಅಥವಾ ಆ ಪಂಚಾಯಿತಿಯವರು fix ಮಾಡುತ್ತಾರೋ, ಯಾವುದು ಮಾನದಂಡ, ಏನು rate? ಯಾಕೆಂದರೆ ಇದೊಂದು ಸರ್ಕಾರದಿಂದ ಆದೇಶ ಹೋಗಿದ್ದರೆ ಅದು Clear ಆಗುತ್ತದೆ. ಇದರಲ್ಲಿ ಮುಖ್ಯವಾಗಿ ನಿಮ್ಮ ಉದ್ದೇಶ ಬಡ ಜನರಿಗೆ ಸಹಾಯ ಮಾಡಬೇಕೆಂದು ಹೊರಟಿದ್ದೀರಿ. ಇಲ್ಲ ಎಂದರೆ ಅಲ್ಲಿ ಸಿಕ್ಕಾಬಟ್ಟೆ ಸಿಟಿ ಪಕ್ಕದಲ್ಲಿ ಇದ್ದರೆ ಎಷ್ಟು rate ಎಂದು ಹೇಳುತ್ತಾರೆ. ಏಕೆಂದರೆ ಅವರಿಗೆ revenue ಬೇಕು. ಏಕೆಂದರೆ ತಮಗೆ ಹೇಳಬೇಕೆಂದರೆ, ಒಂದೊಂದು ಪಂಚಾಯಿತಿಯಲ್ಲಿ ಮೊನ್ನೆ ಒಂದು ರೇಷನ್ ಕಾರ್ಡ್‌ಗೆ photo ತೆಗೆಯುವುದಕ್ಕೆ 20 ರೂ. ಆದರೆ, ಕೆಲವು ಪಂಚಾಯಿತಿಯವರು ನಮ್ಮಲ್ಲಿ ರೆವಿನ್ಯೂ ಇಲ್ಲ, ಕರೆಂಟ್ ತೆಗೆದುಕೊಳ್ಳುವುದಕ್ಕೆ ದುಡ್ಡಿಲ್ಲ ಅಂತ ಹೇಳಿ 100 ರೂ. ಹಾಕಿಕೊಂಡರು. ಹಾಗಾಗಿ ನೀವು ಒಂದು ಮಾನದಂಡ ಹಾಕಿ ಏನಾದರೂ ಒಂದು strict order ಕಳುಹಿಸದೆ ಹೋದರೆ ಅಲ್ಲಿ ಯದ್ವಾ ತದ್ವಾ ಆಗುತ್ತದೆ. ಬೆಂಗಳೂರು ಅಕ್ಕಪಕ್ಕ ಅವರು ಇಷ್ಟು ಅಂತ ಹೇಳಿ fix ಮಾಡಿಕೊಳ್ಳುತ್ತಾರೆ. ಹಾಗಾಗಿ ಇದಕ್ಕೆ ತಾವು ಸರ್ವೆ ಮಾಡಿ ನಿಗದಿತ price fix ಮಾಡಿ ಕೊಟ್ಟಿದ್ದರೆ ನಿಜಕ್ಕೂ ಒಳ್ಳೆಯದಾಗುತ್ತದೆ. ಕೆಲವೊಂದು ಮಾರ್ಪಾಟು ಮಾಡಿ. ಈ ಬಿಲ್ ತರುವುದರಲ್ಲಿ ನನ್ನ ಅಭ್ಯಂತರ ಇಲ್ಲವೆಂದು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು : ಹೀಗೆ ಎಲ್ಲರೂ ಒಟ್ಟಿಗೆ ನಿಂತರೆ ಹೇಗೆ? ಯಾರೋ ಒಬ್ಬರು ಮಾತನಾಡಿ. ರಘುಪತಿ ಭಟ್.

(ಗೊಂದಲ)

ಅಧ್ಯಕ್ಷರು : ನಾನು ಎಲ್ಲರಿಗೂ ಅವಕಾಶ ಮಾಡಿಕೊಡುತ್ತೇನೆ. ಅವರು ಒಬ್ಬರನ್ನು ಬಿಟ್ಟು.

ಶ್ರೀ ಕೆ. ರಘುಪತಿ ಭಟ್ (ಉಡುಪಿ) : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಈಶ್ವರಪ್ಪನವರು ಈ 94ಸಿ ತಿದ್ದುಪಡಿ ತಂದಿರುವುದಕ್ಕೆ ನಾನು ಅವರಿಗೆ, ವಿಶೇಷವಾಗಿ ಸರ್ಕಾರಕ್ಕೆ ಅಭಿನಂದಿಸುತ್ತೇನೆ. ಬಹಳ ವರ್ಷದ ಒಂದು ಬೇಡಿಕೆಯನ್ನು ಪ್ರಥಮ ಬಾರಿಗೆ ತಂದಿದ್ದಾರೆ. 2001 ರಲ್ಲಿ ಶ್ರೀ ಎಸ್.ಎಂ. ಕೃಷ್ಣರವರ ಸರ್ಕಾರ ಇರುವಾಗ ಆದ ನಂತರ 94ಸಿ ಆಗಬೇಕೆಂದು ನಾವು 2004 ರಿಂದ ಶಾಸಕರಾದಂತಹವರು ಪ್ರತಿ ಅಧಿವೇಶನದಲ್ಲಿ ಕೇಳುತ್ತಿದ್ದೆವು. ಇವತ್ತು ತಂದಿದ್ದಾರೆ. ಆದರೆ, 2001 ರಲ್ಲಿ 94ಸಿ ಇದ್ದದ್ದು ಮತ್ತು ಹಿಂದೆ ಇದ್ದದ್ದು ಏನೆಂದರೆ, ಆಗ ನಗರಕ್ಕೆ ಬೇರೆ, ಗ್ರಾಮೀಣಕ್ಕೆ ಬೇರೆ ಎಂದು ಮಾಡಿರಲಿಲ್ಲ. ಎಲ್ಲೆಲ್ಲಿ ಅಕ್ರಮವಾಗಿ ಮನೆ ಕಟ್ಟಿಕೊಳ್ಳುತ್ತಿದ್ದಾರೋ ಅಲ್ಲೆಲ್ಲಾ 94ಸಿ ಯಲ್ಲಿ ಮಾಡಲು ಬಿಟ್ಟಿದ್ದಾರೆ. ಆದರೆ ಈ ಬಾರಿ ಇವರು ಗ್ರಾಮೀಣ ಪ್ರದೇಶಗಳಿಗೆ ಮಾತ್ರ ಮಾಡಿರುವುದರಿಂದ ನಗರ ಪ್ರದೇಶಗಳಲ್ಲಿಯೂ ಇವತ್ತು ಬಹಳಷ್ಟು ಜನರು ಹೀಗೆ ಮನೆ ಕಟ್ಟಿಕೊಂಡಿರುವವರು ಇದ್ದಾರೆ. ನನ್ನ ಪ್ರಶ್ನೆ ಏನೆಂದರೆ, ಸನ್ಮಾನ್ಯ ಈಶ್ವರಪ್ಪನವರು ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು. ನಗರ ಪ್ರದೇಶಗಳಲ್ಲಿ ಯಾರಿಗೂ ನೀವು ಹೊಸ land grant ಕೊಡುವುದಿಲ್ಲ. Already 7–8 ವರ್ಷಗಳಿಂದ ಮನೆ ಕಟ್ಟಿಕೊಂಡು ಇದ್ದಾನೆ. ಅವನನ್ನು ಆ ಮನೆಯಿಂದ ಸರ್ಕಾರಕ್ಕೆ ಎಬ್ಬಿಸಲಿಕ್ಕೆ ಸಾಧ್ಯವಾಗುತ್ತದೆಯೇ? ಯಾವುದೇ ಜನ ಪ್ರತಿನಿಧಿಯಿಂದ ಸಾಧ್ಯವಾಗುತ್ತದೆಯೆ? ಅವನಿಗೆ ಕೆಲವು ಕಡೆ ನಗರಸಭೆಯಲ್ಲಿ ತಾತ್ಕಾಲಿಕ ಮನೆ ನಂಬರ್ ಕೊಟ್ಟು ರೇಷನ್ ಕಾರ್ಡ್ ಆಗಿದೆ. ಅವನಿಗೆ ನೀರಿನ connection ಕೊಟ್ಟಿದೆ. ಅವನು ನಗರ ಪ್ರದೇಶದಲ್ಲಿಯೂ ವಾಸಿಸು ತ್ತಿದ್ದಾನೆ.. ಅವನನ್ನು ನೀವು ಎಬ್ಬಿಸಲಾಗುತ್ತದೆಯೆ? ಇಷ್ಟು ಒಳ್ಳೆಯ ಬಿಲ್ ಅನ್ನು ತರುತ್ತಿದ್ದೀರಿ. 2001 ರಲ್ಲಿ 94ಸಿ ಎಸ್.ಎಂ. ಕೃಷ್ಣರವರು ತಂದಾಗ ಮಹಾನಗರ ಪಾಲಿಕೆಗೆ ಬೇರೆ, ನಗರ ಪ್ರದೇಶಗಳಿಗೆ ಬೇರೆ, ಸಿ.ಎಂ.ಸಿ. ಗೆ ಬೇರೆ ಎಂದು ಮಾಡಿರಲಿಲ್ಲ. ರಾಜ್ಯದಲ್ಲಿ ಯಾರೆಲ್ಲಾ ಅಕ್ರಮವಾಗಿ ಹಿಂದೆ ಮನೆಗಳನ್ನು ಕಟ್ಟಿಕೊಂಡು ಕುಳಿತುಕೊಂಡಿದ್ದಾರೋ ಅವರಿಗೆ one-time ಕೊಡುವಂಥದ್ದು ಮಾಡಿದ್ದಾರೆ. ನನ್ನ ವಿನಂತಿ; ಹಿಂದೆ 2001 ರಲ್ಲಿ ಯಾವ ರೀತಿ ಇತ್ತೋ ಅದೇ ರೀತಿ ಮಾಡಿ. ಏಕೆಂದರೆ ಹೊಸದಾಗಿ land ಕೊಡುವುದಿಲ್ಲ. ಇದು ಕೇವಲ ಅಕ್ರಮ ಮಾಡಿರುವವರಿಗೆ ಸಕ್ರಮ

ಮಾಡುವುದು. ಹಾಗಾಗಿ ಗ್ರಾಮೀಣ ಪ್ರದೇಶಗಳಿಗೆ ಮಾತ್ರ ಮಾಡಿದೆ. ನಗರ ಪ್ರದೇಶಗಳಲ್ಲಿ ಬಹಳಷ್ಟು ಬಡವರು ಇದ್ದಾರೆ. ಯಾರು ಶ್ರೀಮಂತರು, ಹಣ ಇರುವವರು ಸರ್ಕಾರಿ ಜಾಗದಲ್ಲಿ ಕಟ್ಟಿ, ಶೀಟ್ ಹಾಕಿಕೊಂಡು ಕುಳಿತು ಕೊಳ್ಳುವ ಪರಿಸ್ಥಿತಿ ಇಲ್ಲ. ಬಹಳ ಬಡವ ಮಾತ್ರ ಆಗಿರುತ್ತಾನೆ. ನಗರ ಪ್ರದೇಶವನ್ನು ಸೇರಿಸಬೇಕೆಂದು ನಮ್ಮ ಒತ್ತಾಯ. ಇಲ್ಲದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಇದರಿಂದ ನಗರ ಪ್ರದೇಶದ ಜನರಿಗೆ ತೊಂದರೆ ಯಾಗುತ್ತದೆ. ಎರಡನೆಯದು ಬಹಳ ಪ್ರಮುಖವಾಗಿ 5 ಕಿ.ಮೀ. 3 ಕಿ.ಮೀ. ಎಂದು ಮಾಡಿದರು, ಅದು ಆಗಬಾರದು. ನನ್ನ ಪ್ರಶ್ನೆ 2001 ರ ಪ್ರಕಾರ ಅಧಿಕಾರಿಗಳ ಜೊತೆ ಸಮಿತಿಯಲ್ಲಿ ಚರ್ಚೆ ಮಾಡಿದಾಗ ಹೇಳುತ್ತಿದ್ದರು. ಬೆಂಗಳೂರು ನಗರದಲ್ಲಿ ಬಹಳ ಅಕ್ರಮವಾಗಿ ಕುಳಿತುಕೊಳ್ಳುತ್ತಾರೆ, ಅಲ್ಲಿ ಭೂ ಮಾಫಿಯಾ ಬರುತ್ತದೆ ಎಂದು. ಅದು ನೀವು ಏನು ಬೇಕಾದರೂ ನಿರ್ಧಾರ ಮಾಡುವಂತಹುದು, ನೀವು ಬೇಕಾದರೆ ಅಕ್ವೈರ್ ಮಾಡಿಕೊಳ್ಳಿ. ಅಂತೂ 94ಸಿ ನಗರ ಮತ್ತು ಗ್ರಾಮೀಣ ಪ್ರದೇಶಗಳನ್ನು ಸೇರಿಸಿಕೊಂಡು ಮಾಡಿದರೆ ಈಶ್ವರಪ್ಪನವರಿಗೆ ಮತ್ತು ಅವರ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಎರಡನೆಯದು, ಇದರಲ್ಲಿ ಹಣ ನಿಗದಿಯಾಗಿಲ್ಲ. ನಗರ ಪ್ರದೇಶಕ್ಕೆ 750 Sq.Ft. free. ಅದರ ಮೇಲಿದ್ದರೆ ಹಣ ಕಟ್ಟಬೇಕೆಂದು ಇತ್ತು. ಗ್ರಾಮೀಣ ಪ್ರದೇಶಕ್ಕೆ 1305 Sq. Feet ಗೆ free ಉಳಿದದ್ದಕ್ಕೆ ಮಾತ್ರ ಹಣ ಕಟ್ಟಬೇಕೆಂದು ಇತ್ತು. ಅದನ್ನು ಇದರಲ್ಲಿ ತರಬೇಕು. ಏಕೆಂದರೆ, ನಮ್ಮ ಲೆಕ್ಕದಲ್ಲಿ 3 cents ಗ್ರಾಮೀಣಕ್ಕೆ, ನಗರಕ್ಕೆ ಒಂದು ಮುಕ್ಕಾಲು cents free. ಅದು ಉಳಿದದ್ದನ್ನು ಕೊಡಬೇಕೆಂದು ಇತ್ತು. ಹಾಗಾಗಿ ನಗರವನ್ನು ಸೇರಿಸಿ ಮಾಡಿದರೆ ಮಾತ್ರ ಪ್ರಯೋಜನವಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಸಂಖ್ಯೆ ಕಡಿಮೆ ಇದೆ. ನಗರವನ್ನು ಸೇರಿ ಎಲ್ಲಾ ಮಹಾನಗರ ಪಾಲಿಕೆ, ನಗರಸಭೆ ಎಲ್ಲವನ್ನೂ ಸೇರಿಸಿ ಮಾಡಬೆಕು. ಏಕೆಂದರೆ ನನ್ನ ಪ್ರಶ್ನೆ ಏನೆಂದರೆ, ಇದು ಹೊಸದಾಗಿ land grant ಮಾಡುವುದಲ್ಲ. ಯಾರು ಅಕ್ರಮವಾಗಿ ಕುಳಿತುಕೊಂಡಿದ್ದಾರೋ ಅವರಿಗೆ ಸಕ್ರಮವಾಗಿ ಮಾಡುವುದು. ಹಾಗಾಗಿ ನಗರದವರು ಏನೂ ಅನ್ಯಾಯ ಮಾಡಲಿಲ್ಲ. ಹಾಗಾಗಿ ಅದಕ್ಕೂ ಮಾಡಬೇಕು. CRZ ಅನ್ನು ಮತ್ತೊಮ್ಮೆ ತೆಗೆಯಬೇಕು. CRZ ವ್ಯಾಪ್ತಿಯೊಳಗೆ ಕೊಡುವುದಿಲ್ಲ ಎಂದು. ನಮ್ಮ ಕರಾವಳಿ ಭಾಗದಲ್ಲಿ 500 ಮೀಟರ್ ವ್ಯಾಪ್ತಿಯಲ್ಲಿ CRZ ವ್ಯಾಪ್ತಿ ಬರುತ್ತದೆ. ಮೀನುಗಾರರು already ಈಗ ಸರ್ಕಾರಿ ಜಾಗದಲ್ಲಿ ವಾಸಿಸು

ತ್ತಿದ್ದಾರೆ. ಮನೆ ಕಟ್ಟಿಕೊಂಡಿರುವವರು ಇದ್ದಾರೆ. ಅವರಿಗೆ ಇದರಿಂದ ಅನ್ಯಾಯವಾಗುತ್ತದೆ. ಆದುದರಿಂದ CRZ ವ್ಯಾಪ್ತಿಯನ್ನು ತೆಗೆಯಬೇಕು. ಇದಿಷ್ಟನ್ನು ಮಾಡುವಂತೆ ವಿನಂತಿ ಮಾಡುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂಧೀಖಾನೆ ಸಚಿವರು) : ಸನ್ಮಾನ್ಯ ಕಂದಾಯ ಮಂತ್ರಿಗಳಿಗೆ ಸರ್ಕಾರದ ಪರವಾಗಿ ನಾನು ಅಭಿನಂದನೆ ಸಲ್ಲಿಸುತ್ತೇನೆ. ನನ್ನದೊಂದು ಸಲಹೆ ಇದೆ. ಏಕೆಂದರೆ 94ಸಿ ಮೊದಲು ಜಾರಿಯಾಗಿತ್ತು. ಅನೇಕ ಅರ್ಜಿಗಳು ವಿಲೇ ಆಗಲಿಲ್ಲ.

ಅಧ್ಯಕ್ಷರು : ನೀವು cabinet ನಲ್ಲಿ ಮಾತನಾಡಿ.

ಶ್ರೀ ಎ.ನಾರಾಯಣಸ್ವಾಮಿ : ಇರಲಿ. ಇದು ರಾಜ್ಯದ ಸಮಸ್ಯೆ. ಅನೇಕ ಕಡೆ ಕಾಡು provision ಇಲ್ಲ. ಕಲಂ-7(ಎಫ್) ಮುಕ್ತ ಸ್ಥಳಗಳಿಗೆ ಅರ್ಜಿ ಹಾಕುವ ಹಾಗಿಲ್ಲ. ಖರಾಬು, ಬುಲ್ ತೋಪು, ತೋಪು, ನಾಯಿ ಖರಾಬು,

(ಗೊಂದಲ)

ಶ್ರೀ ಎ. ನಾರಾಯಣಸ್ವಾಮಿ : ಒಂದು ನಿಮಿಷ ಇರಿ. ಒಳ್ಳೆಯದು ಆಗಬೇಕೆಂದರೆ ಸಲಹೆ ಕೊಡಬೇಕಲ್ಲ?

ಅಧ್ಯಕ್ಷರು : ನೀವು cabinet ನಲ್ಲಿ ಮಾತನಾಡಬೇಕು. ಇಲ್ಲಿ ಬಂದು ಮಾತನಾಡಿದರೆ ಹೇಗೆ?

ಶ್ರೀ ಎ. ನಾರಾಯಣಸ್ವಾಮಿ : ಅನೇಕ ಕಾನೂನುಗಳಲ್ಲಿ ಸಮಸ್ಯೆಗಳೇ ದೊಡ್ಡದಾಗಿದೆ. 68(1) ಇದೆಯಲ್ಲ, Revenue Act ಸರ್ಕಾರಕ್ಕೆ ಬಿಡಬೇಕು, change of this land.....

ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು) : ನೀವು ಮಂತ್ರಿಗಳಾಗಿ ಆಮೇಲೆ ಸಲಹೆ ಕೊಡಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಅಧ್ಯಕ್ಷರೆ, 94ಸಿ ಗೆ ತಿದ್ದುಪಡಿ ಮಂಡಿಸಿರುವುದನ್ನು ಸ್ವಾಗತಿಸುತ್ತಾ, ಇದು ಬಹಳ ಅತ್ಯಾವಶ್ಯಕವಾಗಿ ಇವತ್ತಿನ ದಿನದಲ್ಲಿ ಆಗಬೇಕಾದ ತಿದ್ದುಪಡಿಯಾಗಿದೆ. ವಿಶೇಷವಾಗಿ ಬಸವವಸತಿ ಯೋಜನೆಯಲ್ಲಿ ಬಹಳಷ್ಟು ಮನೆಗಳನ್ನು ಸರ್ಕಾರ ಮಂಜೂರಾತಿ ಮಾಡುತ್ತಿದೆ. ಇಲ್ಲಿ ಏನಾಗಿದೆ ಎಂದರೆ, ಫಲಾನುಭವಿಗಳ ಆಯ್ಕೆಯಾಗಬೇಕಾದರೆ ಅವರೆಲ್ಲಾ ಈ ಗ್ರಾಮ ಪಂಚಾಯತಿ assessment ನಲ್ಲಿ ದಾಖಲೆಯಿದ್ದರೆ ಮಾತ್ರ ಅವರಿಗೆ ಆ ಅರ್ಹತೆ, ಆ benefit ಪಡೆಯಲು ಸಾಧ್ಯವಾಗುತ್ತದೆ. ಬಹಳಷ್ಟು ಗ್ರಾಮಗಳಲ್ಲಿ ಏನಾಗಿದೆ ಎಂದರೆ, ಗ್ರಾಮಕ್ಕೆ

ಹೊಂದಿಕೊಂಡಂತಹ ಜಾಗದಲ್ಲಿ ಏನು ಕಂದಾಯ ಜಾಗ ಇದೆ, ಕಂದಾಯ ಭೂಮಿ ಅಲ್ಲಿ ತಿಳಿದೋ, ತಿಳಿಯದೋ ಹತ್ತಿಪ್ಪತ್ತು ವರ್ಷಗಳಿಂದ ಮನೆ ಮಾಡಿಕೊಂಡು ವಾಸ ಮಾಡುತ್ತಿರುವ ಜನರಿದ್ದಾರೆ. 30–40 ವರ್ಷಗಳಿಂದ ಇರುವವರೂ ಇದ್ದಾರೆ. ನಮ್ಮ ಗುಂಡ್ಲುಪೇಟೆ ಕ್ಷೇತ್ರದಲ್ಲಿ ಇನ್ನೂ ಕಂದಾಯ ದಾಖಲೆಗಳೇ ಇರುವ 5–6 ಗ್ರಾಮಗಳಿವೆ. ಅವುಗಳು ಇನ್ನು ಗ್ರಾಮ ಪಂಚಾಯಿತಿಗೆ hand over ಆಗಿಯೇ ಇಲ್ಲ. ಬಸವ ಯೋಜನೆಯಲ್ಲಿ assess ಮಾಡಲು ಹೋದಾಗ ಇದು ಬೆಳಕಿಗೆ ಬಂದಿದೆ. ಅವರಿಗೆ ಬೇರೆ ಎಲ್ಲಾ ಸೌಲಭ್ಯಗಳು ದೊರಕುತ್ತಿವೆ. ಆದರೆ, ವಾಸ್ತವಿಕವಾಗಿ ಇನ್ನೂ ಕಂದಾಯ ಇಲಾಖೆಯಿಂದ ಬೇರ್ಪಟ್ಟು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬಂದಿಲ್ಲ. ಇಂತಹ ಸಂದರ್ಭದಲ್ಲಿ ಇಂತಹ ಮನೆಗಳನ್ನು ಏನು ತಾವು ಆಗಸ್ಟ್ 31 ರೊಳಗೆ ಮನೆಗಳಾಗಿರುವ ಪ್ರಕರಣಗಳಿಗೆ ಇದು ಅನ್ವಯಿಸುತ್ತದೆಂದು ಹೇಳಿದ್ದೀರಿ, ಅದು ಸೂಕ್ತವಾಗಿದೆ.

ಶ್ರೀ ಸಿದ್ದರಾಮಯ್ಯ : ಜನವರಿ – 1 ಎಂದು ಹೇಳಿದ್ದಾರೆ. ಆಗಸ್ಟ್–1 ರವರೆಗೆ ಎಂದು ಹೇಳಿ.

ಒಬ್ಬ ಮಾನ್ಯ ಸದಸ್ಯರು : ಇಲ್ಲ 2012 ನೇ ಆಗಸ್ಟ್ 31ನೇ ದಿನಕ್ಕೆ ಮುಂಚೆ. ವಾಸದ ಮನೆಯನ್ನು ನಿರ್ಮಿಸಿರುವುದಕ್ಕಾಗಿ ರುಜುವಾತನ್ನು ಅರ್ಜಿದಾರ ಸಲ್ಲಿಸತಕ್ಕದ್ದು.

ಶ್ರೀ ಸಿದ್ದರಾಮಯ್ಯ : ಅದನ್ನು ಆಗಸ್ಟ್–1 ವರೆಗೆ ಮಾಡಿ ಎಂದು ಹೇಳಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಇಲ್ಲಿ ಒಂದು ಹೇಳಿದ್ದೀರಿ. ಕಲಂ–1 ರಲ್ಲಿ 2012 ಆಗಸ್ಟ್ 31ನೇ ದಿನಕ್ಕೆ ಮುಂಚೆ ವಾಸದ ಮನೆಯನ್ನು ನಿರ್ಮಿಸಿರುವುದಕ್ಕಾಗಿ ರುಜುವಾತನ್ನು. . . .

ಶ್ರೀ ಸಿದ್ದರಾಮಯ್ಯ : Prior to 1st ಜನವರಿ 2012 ಎಂದು ಇದೆಯಲ್ಲ?

ಶ್ರೀ ಕೆ.ಎಸ್. ಈಶ್ವರಪ್ಪ : ಇದರಲ್ಲಿ ಎರಡೂ ಇದೆ. 01.01.2012 ಮನೆ ಕಟ್ಟಿಕೊಂಡಿರುವುದಕ್ಕೆ. ದೃಢೀಕರಣ ಪತ್ರ ಕೊಟ್ಟರೆ ಸಾಕು. ಅರ್ಜಿ ಹಾಕಲು ಆಗಸ್ಟ್ 30 ರವರೆಗೆ ಅವಕಾಶ. ಅರ್ಥವಾಯಿತಲ್ಲ?

ಶ್ರೀ ಸಿದ್ದರಾಮಯ್ಯ : ಇಲ್ಲಿ ಏನಾಗಿದೆ ಎಂದರೆ ಓದುತ್ತೇನೆ. And has constructed a dwelling house on such land prior to thirty

first day of August 2012. ಜನವರಿ–1 ಗಿಂತ ಮೊದಲು unauthorized ಆಗಿ ಕಟ್ಟಿಕೊಂಡಿರುವವರು ಎಂದು ಅರ್ಥ. ಅದು ಏಕೆ? ಆಗಸ್ಟ್‌ವರೆಗೆ ಮಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾಡಬಹುದು. ಆದರೆ ಇವತ್ತಿನಿಂದಲೇ ಗುಡಿಸಲು ಬೆಳೆಯಲು ಶುರುವಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಏನೂ ಆಗುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಏನೂ ಆಗಲ್ಲ ಅಲ್ಲ. ನಿನ್ನೆ ನಾವು ಸಾಕಷ್ಟು ಚರ್ಚೆ ಮಾಡಿದೆವು ಇದನ್ನು.

ಶ್ರೀ ಸಿದ್ದರಾಮಯ್ಯ : ನನ್ನ ಪ್ರಕಾರ ಕೆಲವರು ಫೆಬ್ರವರಿಯಲ್ಲಿ ಕಟ್ಟಿಕೊಂಡು ಬಿಟ್ಟಿದ್ದರಪ್ಪ. ಅದಕ್ಕೇನು ಮಾಡುತ್ತೀರಿ?

ಶ್ರೀ ಕೆ.ಎಸ್. ಈಶ್ವರಪ್ಪ : ಎಲ್ಲರನ್ನು ನಾವು ಬಿಟ್ಟು ಬಿಟ್ಟರೆ ಎಲ್ಲಿಯೂ ಜಾಗ ಉಳಿಯುವುದಿಲ್ಲ. ಮತ್ತೆ ನಮಗೆ ಅವಕಾಶವನ್ನು ಕೊಡಿ ಎಂದು ಅವರು ನಿಮ್ಮ ಹತ್ತಿರವೇ ಬರುತ್ತಾರೆ.

SRI SIDDARAMAIAH : That is true. When we are helping the rural people. . . . .

ಶ್ರೀ ಕೆ.ಎಸ್. ಈಶ್ವರಪ್ಪ : You are right. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಇವತ್ತಿನಿಂದಲೇ ಅದಕ್ಕೆ ನಾವು ಅವಕಾಶವನ್ನು ಕೊಟ್ಟರೆ ಇನ್ನು ಅಕ್ರಮವಾಗಿ ಎಲ್ಲಾ ಜಾಗದಲ್ಲಿಯೂ ಕಟ್ಟುವುದಕ್ಕೆ ಪ್ರಾರಂಭ ಮಾಡಿ ಬಿಡುತ್ತಾರೆ. ಅದನ್ನು ನಾವು ಇಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ. ನಾವು ಅವರಿಗೆ ಅವಕಾಶವನ್ನು ಕೊಟ್ಟರೆ ನಿಮಗೆ ಕಟ್ಟುವುದಕ್ಕೆ ಅವಕಾಶವಿದೆ ಎಂದು ಹೇಳಿದ ಹಾಗೆ ಆಗುತ್ತದೆ. ಯಾರು 20–30 ವರ್ಷದಿಂದ ಮಾಡುತ್ತಿದ್ದಾರೆ ಅವರಿಗೆ ಈ ಅವಕಾಶ ಸಿಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಈಗ ನಾನು ಹೇಳುವುದೇನೆಂದರೆ ಅದನ್ನು ನೀವು ಏನು ಮಾಡಿದರೂ ಕೂಡ, cut off date January ಎನ್ನುವುದಕ್ಕೆ ನಿಮ್ಮ ಹತ್ತಿರ ಏನು ದಾಖಲಾತಿಗಳು ಇರುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅವರುಗಳು ಡಿ.ಸಿ. ಯವರ ಹತ್ತಿರ ಅರ್ಜಿಯನ್ನು ಹಾಕಿರುತ್ತಾರೆ.

ಶ್ರೀ ಸಿದ್ದರಾಮಯ್ಯ : ನನ್ನ ಪ್ರಕಾರ ರೆಕಾರ್ಡ್ಸ್ ಮುಖಾಂತರ ನಾವು ಅದನ್ನು prove ಮಾಡುವುದಕ್ಕಾಗುವುದಿಲ್ಲ. ರೆವಿನ್ಯೂ ಲ್ಯಾಂಡ್‌ನಲ್ಲಿ

ಅವರುಗಳು ಮನೆಯನ್ನು ಕಟ್ಟಿಕೊಂಡಿದ್ದರೆ ಗುಡಿಸಲುಗಳನ್ನು ಕಟ್ಟಿಕೊಂಡಿದ್ದರೆ ಅವರು ನಾಳೆವರೆಗೆ ಕಟ್ಟಿಕೊಂಡಿರಲಿ, ಗುಡಿಸಲು ಎಂದು ಹೇಳುವುದಕ್ಕೆ ಹೋಗಬೇಡಿ, dwelling house ಎಂದು ಮಾಡಿ. ವಾಸದ ಮನೆಗಳು ಎಂದು ಮಾಡಬೆಕು. ಈಗ ಗುಡಿಸಲುಗಳೆಲ್ಲವೂ ಕ್ಲಿಯರ್ ಆಗಿಬಿಟ್ಟಿದೆ. ಗುಡಿಸಲುಗಳನ್ನು ಬದಲಾಯಿಸಿ ಮನೆಗಳನ್ನು ಕಟ್ಟಿ ಆಗಿದೆ. ಗುಡಿಸಲುಗಳು ಇರುವುದಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ : ನಿಮಗೆ ಟೀಕೆ ಮಾಡುವುದಕ್ಕೆ ಇದೊಂದು ಅವಕಾಶ ಸಿಕ್ಕಿದೆ, ನೀವು ಮಾಡಿ ಬೇಡವೆಂದು ಹೇಳುವುದಿಲ್ಲ.

SRI SIDDARAMAIAH : No, not with any intention.

ಶ್ರೀ ಕೆ.ಎಸ್. ಈಶ್ವರಪ್ಪ : ನಿಮ್ಮ ಉದ್ದೇಶವು ಖಂಡಿತವಾಗಿಯೂ ಸರಿ ಇದೆ. ಆದರೆ, ಇವತ್ತು ನಾವು ಅಕ್ರಮವಾಗಿ ಕಟ್ಟಿಕೊಂಡವರಿಗೆ encourage ಮಾಡಿದಂತಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಇಲ್ಲದೆ ಹೋದರೆ March 31st ಎಂದಾದರೂ ಆಗಬೇಕು. ಮಾರ್ಚ್ ಎಂದು ಹಾಕಿ.

ಶ್ರೀ ಟಿ.ಬಿ. ಜಯಚಂದ್ರ : 1st day of August ಎಂದು ಹೇಳಿದರೆ ಯಾವಾಗ? ಆಗಸ್ಟ್ ಆಗಿ ಹೋಯಿತಲ್ಲಾ?

ಶ್ರೀ ಕೆ.ಎಸ್. ಈಶ್ವರಪ್ಪ : 30th August.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : March 31st, year end ಎಂದು ಆಗಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ಈ month end ತನಕ ಎಂದು ಮಾಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ನಿಮ್ಮ application ನಲ್ಲಿ prior to 31st August 2012, ನೀವು 1st day of August ಎಂದು ಹೇಳುತ್ತೀರಿ. ಈಗ ಆಗಸ್ಟ್ ಆಗಿಹೋಯಿತ್ತಲ್ಲಾ?

ಶ್ರೀ ಕೆ.ಎಸ್. ಈಶ್ವರಪ್ಪ : ಆಗಸ್ಟ್ ತಿಂಗಳು ಮೊನ್ನೆ ಪ್ರಾರಂಭವಾಗಿದೆ. ಅದನ್ನು 30.8.2012ರ ವರೆಗೆ ಅವಕಾಶವನ್ನು ಕೊಡಬೇಕೆಂದು ಮಾಡಿದ್ದೇವೆ.

ಶ್ರೀ ಟಿ.ಬಿ. ಜಯಚಂದ್ರ : 30.8.2012 ಎಂದು ಬೇಡ ಇನ್ನು ಒಂದು ತಿಂಗಳು extend ಮಾಡಿ ಸೆಪ್ಟೆಂಬರ್ ಎಂದು ಹೇಳಿಬಿಡಿ. ಏಕೆಂದರೆ, ಇದು

ರಾಜ್ಯಪಾಲರಿಗೆ ಹೋಗಿ ಅಪ್ರೂವ್ ಆಗಿ ಬಂದು ನೋಟಿಫಿಕೇಷನ್ ಮಾಡಬೇಕು. Order pass ಆಗಬೇಕೆಂದರೆ ಇವರು notification ಮಾಡಬೇಕಲ್ಲವೇ?

ಶ್ರೀ ಸಿದ್ದರಾಮಯ್ಯ : 60 days ಎಂದು ಹೇಳಿ.

ಶ್ರೀ ಟಿ.ಬಿ. ಜಯಚಂದ್ರ : 60 days ಎಂದು ಹೇಳಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ನೀವು ಇದನ್ನು ತಂದ ಮೇಲೆ ಅದು ಜನರಿಗೆ ಗೊತ್ತಾಗಬೇಕಲ್ಲವೇ?

ಶ್ರೀ ಸಿದ್ದರಾಮಯ್ಯ : Act ಆದ ಮೇಲೆ ಇನ್ನು 60 ದಿನ ಆಗಬೇಕು.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : Act ಆದ ಮೇಲೆ ಅವರಿಗೆ 60 ದಿನಗಳವರೆಗೆ ಕಾಲಾವಕಾಶವನ್ನು ಕೊಡಿ.

ಶ್ರೀ ಟಿ.ಬಿ. ಜಯಚಂದ್ರ : From the date of notification ಎಂದು ಹೇಳಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾರ್ಚಿ 31 ರೊಳಗಡೆ ವಾಸವಿರುವಂತಹ ಮನೆಗಳು.

ಶ್ರೀ ಸಿದ್ದರಾಮಯ್ಯ : ನೀವು ಮಾರ್ಚಿ 31 ರೊಳಗೆ ಎಂದು ಮಾಡಿಬಿಡಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಸರ್ಕಾರಿ ಭೂಮಿಯ ವಿಚಾರದಲ್ಲಿಯೂ ಕೆಲವು clarification ಕೊಡುವುದು ಒಳ್ಳೆಯದು. ಏಕೆಂದರೆ ಗೋಮಾಳದಲ್ಲಿ ಬಹಳಷ್ಟು ಕಡೆಗಳಲ್ಲಿ ಮನೆಗಳನ್ನು ಮಾಡಿ ಕೊಂಡಿದ್ದಾರೆ. ಗೋಮಾಳವು ಸರ್ಕಾರಿ ಭೂಮಿಯಾಗಿರುತ್ತದೆ. ಆದರೆ ಗೋಮಾಳವು ಬೇರೆ ಬೇರೆ ಕಾರಣಕ್ಕಾಗಿ ಯಾವುದೇ ಪರಭಾರೆ ಮಾಡಬಾರದು ಅದನ್ನು ಬೇರೆ ಉದ್ದೇಶಕ್ಕೆ ಕೊಡಬಾರದು ಎಂದು ಇದೆ. At the same time, ಅಲ್ಲಿಯ cattle population ಮೇಲೆ ಇದನ್ನು ಮಾಡಬೇಕು.

ಶ್ರೀ ಟಿ.ಬಿ. ಜಯಚಂದ್ರ : ಇದನ್ನು ನೀವು ಬರುವುದಕ್ಕಿಂತ ಮುಂಚೆಯೇ ನಿಮ್ಮ ವಿಚಾರವನ್ನು ಹೇಳಿದ್ದೇನೆ. ದಯಮಾಡಿ ಈ ವಿಚಾರವನ್ನು ಮಹದೇವ ಪ್ರಸಾದ್‌ರವರು ಪ್ರಸ್ತಾಪ ಮಾಡುತ್ತಿದ್ದಾರೆ. ಗೋಮಾಳವನ್ನು ಕಟ್ಟಿಕೊಂಡಿರುವುದಲ್ಲ, ನಿಮ್ಮ ಊರಿನ ಪಕ್ಕದಲ್ಲಿ ಗೋಮಾಳ ಇದೆ.

ಅಧ್ಯಕ್ಷರು : ಗೋಮಾಳ, ಇದಕ್ಕೆಲ್ಲಾ ತಾವು encourage ಮಾಡಬೇಡಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಊರಿನ ಪಕ್ಕದಲ್ಲಿ ಗೋಮಾಳ ಇದೆ. ಇದರಲ್ಲಿ ನನ್ನ ಮನವಿ ಏನೆಂದರೆ,.....

ಅಧ್ಯಕ್ಷರು : ಗೋಮಾಳ ಎಲ್ಲವೂ ಊರಿನಲ್ಲಿ ಇರಲಿ. ಹಾಗೆಲ್ಲಾ ಮಾಡುತ್ತಾ ಹೋದರೆ ಊರೇ ಉಳಿಯುವುದಿಲ್ಲ. ಗೋಮಾಳದಲ್ಲಿಯೂ ಮನೆಗಳನ್ನು ಕಟ್ಟುವುದಕ್ಕೆ ಬಿಟ್ಟರೆ ಸರಿಯಾಗುವುದಿಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ನನ್ನ ಅಭಿಪ್ರಾಯವನ್ನು practical ಆಗಿ ಹೇಳುತ್ತಿದ್ದೇನೆ.

ಅಧ್ಯಕ್ಷರು : ನಾವೂ ಸಹ ಹಳ್ಳಿಯ ಬಗ್ಗೆ ಯೋಚನೆ ಮಾಡಿ ಹೇಳುತ್ತಿರುವುದು. ನೀವು ಗೋಮಾಳವನ್ನು ಉಳಿಸುವುದಿಲ್ಲವೆಂದರೆ ಏನು?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು : ತಾವು ಮಾತನಾಡಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ನಾನು practical ಆಗಿ ಇರುವಂತಹ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ.

ಅಧ್ಯಕ್ಷರು : ಈ ರೀತಿಯಾಗಿ ಮಾಡುತ್ತಾ ಹೋದರೆ ನಾಳೆ ದಿವಸ ಗೋಮಾಳ, ದೇವಸ್ಥಾನ ಯಾವುದೂ ಉಳಿಯುವುದಿಲ್ಲ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ನಾನು ನನ್ನ ಕ್ಷೇತ್ರದ ಅನುಭವ ಹೇಳುತ್ತಿದ್ದೇನೆ. ಗೋಮಾಳ ಅಂತ ಏನು ಜಮೀನು ಇದೆ, ಅದು cattle populationನ ಸಂಖ್ಯೆಗೆ ಅನುಗುಣವಾಗಿ ಜಮೀನನ್ನು ನಿಗದಿ ಪಡಿಸುತ್ತಾರೆ.

ಅಧ್ಯಕ್ಷರು : ಅವೆಲ್ಲವೂ ಸರಿಯಾಗಿದೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಇಷ್ಟು ಜಮೀನಿಗೆ ಯಾವ ಗ್ರಾಮದಲ್ಲಿ ಹೆಚ್ಚುವರಿಯಾಗಿ ಜಮೀನುಗಳು ಇರುತ್ತದೆ. ಅಂತಹ ಕಡೆಗಳಲ್ಲಿ ಮಂಜೂರು ಮಾಡತಕ್ಕಂತಹ ಅವಕಾಶ ಕಂದಾಯ ಕಾಯಿದೆಯಡಿಯಲ್ಲಿ ಇದೆ. ಇದರ ಬಗ್ಗೆ ಸರ್ಕಾರ ಸುತ್ತೋಲೆಯಲ್ಲಿಯೂ ಕೂಡ ಇದೆ. ಅಂತಹ ಕಡೆಗಳಲ್ಲಿ ಈಗ already ಮನೆಗಳನ್ನು ಕಟ್ಟಿಕೊಂಡು ಬಿಟ್ಟಿದ್ದಾರೆ. ಆ ಗೋಮಾಳದಲ್ಲಿರುವವರನ್ನು ನೀವು ಈ ಕಾಯಿದೆಗೆ ತಂದು ಅಲ್ಲಿ ಅವರಿಗೆ

ಗ್ರಾಮಕ್ಕೆ ಹೊಂದಿಕೊಂಡಿರುವಂತಹ ಜಾಗವಿರುತ್ತದೆ. ಆ ಗೋಮಾಳದಲ್ಲಿ ಮೇವುಗಳನ್ನು ಬೆಳೆಯುವುದಕ್ಕಾಗುವುದಿಲ್ಲ, ದನಕರುಗಳನ್ನು ಮೇಯಿಸುವುದಕ್ಕಾಗುವುದಿಲ್ಲ ದನಕರುಗಳನ್ನು ಅಲ್ಲಿ ಕಟ್ಟಿಹಾಕುವುದಕ್ಕಾಗುವುದಿಲ್ಲ. ಅದರಿಂದ ಏನೂ ಪ್ರಯೋಜನವಿಲ್ಲ. ಆದರೆ ಅಲ್ಲಿ ಮನೆಗಳನ್ನು ಕಟ್ಟಿಕೊಂಡು ಹತ್ತಾರು ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ಅಂತಹ ಗೋಮಾಳದ ಜಾಗವನ್ನು ನೀವು relax ಮಾಡದೆ ಹೋದರೆ ಪ್ರಸ್ತುತ ಈ ಕಾಯಿದೆಯ ತಿದ್ದುಪಡಿಯ ಉದ್ದೇಶ ಸಫಲವಾಗುವುದಿಲ್ಲ ಆದ್ದರಿಂದ ಅದನ್ನೂ ಸಹ ತಾವು ಇಂತಿಂತಹ land ಎಂದು ತಾವು Specification ಮಾಡಬಾರದು. ಯಾವುದೇ ಸರ್ಕಾರಿ ಭೂಮಿ ಗ್ರಾಮಕ್ಕೆ ಹೊಂದಿಕೊಂಡಿದ್ದರೆ, ಅಲ್ಲಿ ಹತ್ತಾರು ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿರುವವರಿಗೆ ಅದು ಯಾವುದೇ ಸರ್ಕಾರಿ ಭೂಮಿಯಾಗಿದ್ದರೂ ಅದಕ್ಕೆ ಮಂಜೂರು ಮಾಡತಕ್ಕಂತಹ ಒಂದು ಆದೇಶ ತಿದ್ದುಪಡಿ ಆದಾಗ ಮಾತ್ರ ಇದು ಸಫಲವಾಗುತ್ತದೆ ಇಲ್ಲದೆ ಹೋದರೆ. . . . .

ಒಬ್ಬ ಮಾನ್ಯ ಸದಸ್ಯರು : ಅಲ್ಲಿ ಕಟ್ಟಿಕೊಂಡವರಿಗೆ ನೀವು ಕೊಡಬೇಕಾಗುತ್ತದೆಯಲ್ಲಾ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಖಾಲಿ ಇದ್ದರೆ ಕೊಡಬೇಡಿ. ಯಾವುದು existing ಮನೆಗಳು ಇದೆ ಅಂತಹವರಿಗೆ ಮಾತ್ರ ಕೊಡಬೇಕು. ಜಾಗದ್ದು ಮಂಜೂರಾತಿಗೆ ನಾವು recommend ಮಾಡುವುದಿಲ್ಲ. ಈಗ 20–30 ವರ್ಷದಿಂದ ಊರಿಗೆ ಹೊಂದಿಕೊಂಡಂತೆಯೇ ಊರಿಗೆ ಸೇರಿದ ಹಾಗೆಯೇ ಇದುವರೆಗೂ ಅಲ್ಲಿ Revenue Department ನವರು Point out ಮಾಡಿರುವುದಿಲ್ಲ. ಗ್ರಾಮ ಪಂಚಾಯಿತಿಯವರು ಅದರ ಬಗ್ಗೆ ನೋಟಿಸ್ ಮಾಡದೆಯೇ ವಾಸ ಮಾಡುತ್ತಿದ್ದಾರೆ. ಅಂತಹವರಿಗೆ ಬಸವ ವಸತಿ ಯೋಜನೆ ಒಂದು ಸ್ಕೀಮ್ ಅನ್ನು ಮಾನ್ಯ ಸೋಮಣ್ಣನವರು ತಂದು ಮನೆಗಳನ್ನು ಕೊಡುತ್ತೇನೆಂದು ಮಾಡುತ್ತಿದ್ದಾರೆ. ನಾನು ನಿಮ್ಮ ಪರವಾಗಿಯೇ ಮಾತನಾಡುತ್ತಿದ್ದೇನೆ. ಅಲ್ಲಿ 3–4 ವರ್ಷಗಳಿಂದ ಮನೆಗಳನ್ನು ಕೊಟ್ಟಿರುವುದಿಲ್ಲ, ಈ ಸಲ ಮನೆಗಳನ್ನು ಕೊಡುವುದಕ್ಕೆ ಹೊರಟಿದ್ದಾರೆ. ಅಲ್ಲಿ ಕೊಟ್ಟಿರುವಂತಹ ಮನೆಗಳು ನಿರ್ಮಾಣವಾಗಬೇಕಾದರೆ ಈ ಒಂದು ನ್ಯೂನತೆಗಳನ್ನು ಸರಿಪಡಿಸಬೇಕಾಗುತ್ತದೆ. ಆ ದೃಷ್ಟಿಯಿಂದ ಇದು ವಾಸ್ತವವಾದ ವಿಚಾರ

ವಾಗಿದೆ. ನಮಗೆ ಉಸ್ತುವಾರಿ ಸಚಿವರಾಗಿದ್ದಾರೆ ನಾವು ಅವರಿಂದ ಇದನ್ನು ನಿರೀಕ್ಷೆ ಮಾಡುತ್ತೇನೆ.

ಶ್ರೀ ವಿ. ಸೋಮಣ್ಣ (ವಸತಿ ಸಚಿವರು) : ಮಾನ್ಯ ಅಧ್ಯಕ್ಷರೆ, ಬಸವ ವಸತಿ ಯೋಜನೆಯನ್ನು ಮಾಡಿದ ಮೇಲೆ ಪ್ರಾಯಶಃ ಅದಕ್ಕೇನು ಈ ಒಂದು ಸೆಕ್ಷನ್ 94C ಅನ್ನು ತಂದಿದ್ದೇವೆ. ಇದು ಒಂದು ಒಳ್ಳೆಯ ಕಾಯಿದೆ ಇದರ ಜೊತೆಯಲ್ಲಿ ಗೋಮಾಳದ ಬಗ್ಗೆ ಏನು ಜಯಚಂದ್ರ ಸಾಹೇಬರು ಮತ್ತು ಕೆಲವರು ಹೇಳಿದ್ದಾರೆ, ನಾವು ಅದನ್ನು ಏನಾದರೂ ಮುಟ್ಟಿದರೆ ಜಯಚಂದ್ರರವರೆ, ಪ್ರಾಯಶಃ ನನಗನಿಸುತ್ತದೆ ಒಂದು ಇಂಚು ಕೂಡ ಜಾಗವು ಸಿಗುವುದಿಲ್ಲ. ಇರತಕ್ಕಂತಹ ಗೋಮಾಳಗಳು ಬಗರ್ ಹುಕುಂ ಜಾಗಗಳೆಲ್ಲವು ಆಗಿಹೋಗಿದೆ. ಅದನ್ನು ಮಾಡುವುದು ಬೇಡ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಅಲ್ಲಿ ಯಾರ್‍ಯಾರು ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದವರಿಗೆ ನೀವು ಅವಕಾಶವನ್ನು ಕೊಡದೆ ಗೋಮಾಳವನ್ನು ಮುಟ್ಟುವುದಕ್ಕಾಗುವುದಿಲ್ಲವೆಂದರೆ ಅದು ಸರಿಯಾಗುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ನೀವು ಉಳಿದಿರುವಂತಹ ಗೋಮಾಳವನ್ನು ಉಳಿಸಿಕೊಳ್ಳಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಅಲ್ಲಿ ಕಟ್ಟಿಕೊಂಡಿರುವಂತಹ ಮನೆಯವರಿಗೆ ನೀವು ಇದನ್ನು regularize ಮಾಡದೆ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಹೆಚ್ಚಿನ ಭಾಗ ಗೋಮಾಳಗಳಲ್ಲಿ ಇಂತಹ ಮನೆಗಳು ಇವೆ. ಅದರಿಂದ ತಾವು ಪರಿಗಣಿಸಬೇಕು. ಈಗ 10 ಕಿ.ಮೀ. ಪೌರನಿಗಮಗಳ ಅಧಿನಿಯಮದಡಿಯಲ್ಲಿ ಏನು ಹೇಳಿದ್ದೀರಿ, ಅದು ಅಷ್ಟು ಪ್ರಸ್ತುತವಾಗುವುದಿಲ್ಲ. ಅದೇ ರೀತಿಯಾಗಿ ಇನ್ನೊಂದು ಸೆಕ್ಷನ್ 4 ಸಿ ಯಲ್ಲಿ ಇದೆ, ಪುರಸಭೆಗಳು ಮತ್ತು ಗ್ರಾಮ ಪಂಚಾಯಿತಿಗಳ ಹೊರಗಿನ ವರ್ತುಲದಿಂದ 3 ಕಿ.ಮೀ. ಮಿತಿಯೊಳಗೆ ಇರುವ ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸುವುದಿಲ್ಲವೆಂದು ಇದೆ. ಗ್ರಾಮಪಂಚಾಯಿತಿಗಳ ವ್ಯಾಪ್ತಿಯಿಂದ ಇದನ್ನು ಬೇರ್ಪಡಿಸಬೇಕು. ಬೇಕಾದರೆ ನಗರಸಭೆ ಮತ್ತು ಪುರಸಭೆ ಎಂದು restrict ಮಾಡಿ. ಗ್ರಾಮಪಂಚಾಯತಿ ಎಂದರೆ ಅದು ಒಂದು ಹಳ್ಳಿಯೇ ಆಗಿರುತ್ತದೆ. ನಾವು ವಾಸ ಮಾಡುತ್ತಿರುವಂತಹದ್ದು ಟೌನ್ ಪಂಚಾಯತಿ ಮತ್ತು ಗ್ರಾಮ

ಪಂಚಾಯಿತಿಗಳನ್ನು restriction ನಿಂದ ಹೊರಗೆ ತರಬೇಕು. ನಾವು ಹೇಳುವುದೇನೆಂದರೆ ಎಲ್ಲಾ ಗ್ರಾಮ ಪರಿಮಿತಿಯಲ್ಲಿಯೆ ಎಷ್ಟೋ ಕಡೆ ಕಂದಾಯ ಇಲಾಖೆಯ ಜಾಗಗಳು ಇವೆ. ಅವುಗಳು ಊರಿಗೆ ಸೇರಿದ ಹಾಗೆಯೇ ಅಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ನನ್ನ ಎದುರಿಗೆ ನಮ್ಮ ಕ್ಷೇತ್ರದಲ್ಲಿ ಎರಡು ಗ್ರಾಮಗಳು ಇವತ್ತೂ ಕೂಡ ರೆವಿನ್ಯೂ ದಾಖಲೆಯಲ್ಲಿಯೇ ಇವೆ. ಅಂತಹವನ್ನು ಇದರಲ್ಲಿ regularize ಮಾಡುವುದಕ್ಕೆ ಇದೊಂದು ಅವಕಾಶ ಬಂದಿದೆ. ಅದನ್ನು ಗೋಮಾಳದಲ್ಲಿ ಅಥವಾ ಇನ್ನೊಂದರಲ್ಲಿಟ್ಟು ಯಾವ land ಎಂದು status ತೆಗೆದುಕೊಂಡು ಬಿಟ್ಟು ಅದನ್ನು ಮಾಡುವುದಕ್ಕಾಗುವುದಿಲ್ಲವೆಂದರೆ ಇದರ ಮೂಲ ಉದ್ದೇಶವೇ ವಿಫಲವಾಗುತ್ತದೆ. ಆದ್ದರಿಂದ ದಯಮಾಡಿ ಅದನ್ನು ತೆಗೆಯಬೇಕು. ಗ್ರಾಮ ಪಂಚಾಯಿತಿ, ಟೌನ್ ಪಂಚಾಯಿತಿ ವ್ಯಾಪ್ತಿಯಿಂದ ಈ ಕಿ.ಮೀ. restriction ಏನು ಇದೆ ಅದನ್ನು ಹೊರತರಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : 1964 ಕಂದಾಯ ಇಲಾಖೆಯ ಸೆಕ್ಷನ್ 94ಸಿ ಗೆ ಏನು ತಿದ್ದುಪಡಿಯನ್ನು ತಂದಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ ಇದು ಸುಮಾರು 16 ವರ್ಷದ ಹಿಂದೆಯೇ ತರಬೇಕಾಗಿತ್ತು. ಹಿಂದೆ ಶ್ರೀ ಹೆಚ್.ಡಿ. ದೇವೇಗೌಡರು ಮುಖ್ಯ ಮಂತ್ರಿಗಳಾಗಿದ್ದ ಕಾಲದಲ್ಲಿ, ಈ ಬಗ್ಗೆ ಶ್ರೀ ಸೋಮಣ್ಣನವರಿಗೆ ಗೊತ್ತಿದೆ. ಈ ಒಂದು ತಿದ್ದುಪಡಿಯನ್ನು ತರಬೇಕಾದರೆ ಸುಮಾರು 16 ವರ್ಷಗಳು ಬೇಕಾಯಿತೇ?

ಬಡವರ ಬಗ್ಗೆ ಮಾನ್ಯ ಈಶ್ವರಪ್ಪನವರು ಕರುಣೆಯಿಟ್ಟು ಈ ಬಿಲ್ ಅನ್ನು ತಂದಿದ್ದಾರೆ, ಇದಕ್ಕೆ ನಾವು ವಿರೋಧ ಮಾಡುವುದು ಸೂಕ್ತವಲ್ಲ. ಆದರೆ ಇದರಲ್ಲಿ ಮಾನ್ಯ ಅಧ್ಯಕ್ಷರೆ, ಈಗಾಗಲೇ ಜನವರಿ 2012 ಎಂದು ಹೇಳಿದ್ದೀರಿ. ಮತ್ತೆ ಇನ್ನೊಂದರಲ್ಲಿ ಜನವರಿ ಮೊದಲನೇ ವಾರದ ದಿನಕ್ಕೆ ಮುಂಚಿತವಾಗಿ ವಾಸದ ಮನೆ ಎಂದು ಹೇಳಿದ್ದೀರಿ. ಅದನ್ನು ಈಗ ಇನ್ನೂ ಎರಡು ತಿಂಗಳು ಜಾಸ್ತಿ ಕೊಡುತ್ತೇವೆಂದು ಹೇಳಿದ್ದೀರಿ. ಅದರ ಜೊತೆಗೆ ಇನ್ನೊಂದು, ನಗರ ಪ್ರದೇಶದಲ್ಲಿ ಏಕೆಂದರೆ, ಕೆಲವರು ಬಡವರು ಹತ್ತಾರು ವರ್ಷಗಳಿಂದ ಕಟ್ಟಿಕೊಂಡಿರುವವರು ಇದ್ದಾರೆ. ಹಿಂದೆ ಮಾನ್ಯ ದೇವೇಗೌಡರು ಅಧಿಕಾರದಲ್ಲಿ ಇದ್ದಂತಹ ಸಂದರ್ಭದಲ್ಲಿ.....

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ರೇವಣ್ಣನವರೆ, ಒಂದೇ ನಿಮಿಷ. ಮಾನ್ಯ ಅಧ್ಯಕ್ಷರೆ, ಮಾನ್ಯ ರಘುಪತಿ ಭಟ್‌ರವರು, ಮಾನ್ಯ ರೇವಣ್ಣನವರೂ ಸಹ ಮಾತನಾಡಿದರು. ಈಗಾಗಲೇ ಅಕ್ರಮ ಸಕ್ರಮದ ಮುಖಾಂತರ ನಗರ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವವರಿಗೆ ಕೊಡಬೇಕೆಂದು ಬಿಲ್ ಅನ್ನು ಪಾಸ್ ಮಾಡಿಬಿಟ್ಟಿದ್ದೇವೆ. ಅದು ಮಾನ್ಯ ರಾಜ್ಯಪಾಲರ ಹತ್ತಿರ ಹೋಗಿ ಕುಳಿತಿದೆ. ಅವರ ಹತ್ತಿರವೂ ಕೂಡ ನಾವು ಹೋಗಿ ಮನವಿ ಮಾಡುತ್ತೇವೆ.

ಶ್ರೀ ಕೆ. ರಘುಪತಿ ಭಟ್ : ಅವರ ಪಟ್ಟಾ ಜಾಗದಲ್ಲಿ ಅವನು ವ್ಯತಿರಿಕ್ತವಾಗಿ ಕಟ್ಟಿದ್ದರೆ, ಅದು ಬೇರೆ ತರಹ ಆಗುತ್ತದೆ. ಅಕ್ರಮ ಸಕ್ರಮದ್ದು ಇದರಲ್ಲಿ ಬರುವುದಿಲ್ಲ. ಅದು ಅಕ್ರಮ ಕಟ್ಟಡದ್ದು ಮಾತ್ರ. ಇದು ಸರ್ಕಾರಿ ಜಾಗದಲ್ಲಿ ಕಟ್ಟಿದ್ದರೆ ಅದು ಬರುವುದಿಲ್ಲ. ಸ್ವಂತ ಜಾಗದಲ್ಲಿ ನಾನು ವ್ಯತಿರಿಕ್ತವಾಗಿ ಕಟ್ಟಿದ್ದರೆ, ಅದು ಅಕ್ರಮ ಕಟ್ಟಡವಾಗುತ್ತದೆ. ಅದು ಅಕ್ರಮ ಸಕ್ರಮವಾಗುತ್ತದೆ, ಅದು ಇದರಲ್ಲಿ ಬರುವುದಿಲ್ಲ. ಮಾನ್ಯ ರೇವಣ್ಣನವರು ಹೇಳಿದಂತೆ, ಅದನ್ನೂ ಇದರಲ್ಲಿ ಮಾಡಬೇಕು. 2001 ರಲ್ಲಿ ಮಾಡುವಾಗ ನಗರದ್ದನ್ನೂ ಸೇರಿಸಿದ್ದರು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸೋಮಣ್ಣ ನವರಿಗೆ ಗೊತ್ತಿದೆ. 1994ನೇ ಇಸವಿಯಿಂದ ಇದರ ಬಗ್ಗೆ ಹೋರಾಟ ನಡೆಯುತ್ತಿತ್ತು. ಮಾನ್ಯ ದೇವೇಗೌಡರು ಇದರ ಬಗ್ಗೆ ಎರಡು ಸಾರಿ ಪ್ರಯತ್ನ ಮಾಡಿದ್ದರು. ಮಾನ್ಯ ಎಸ್.ಎಂ.ಕೃಷ್ಣರವರ ಕಾಲದಲ್ಲೂ ಮಾನ್ಯ ದೇವೇಗೌಡರು ಈ ಬಗ್ಗೆ ಒಂದು ಜಾಥಾವನ್ನು ಮಾಡಿದ್ದರು. ಬೆಂಗಳೂರು ನರದಲ್ಲಿ ಕೆಲವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅವರಿಗೆ ಮಾರ್ಕೆಟ್ ರೇಟ್ ಏನಿದೆಯೋ, ಅದನ್ನು fix ಮಾಡಿ. ಇದರಿಂದ ಸರ್ಕಾರಕ್ಕೆ ದುಡ್ಡೂ ಸಹ ಬರುತ್ತದೆ. 1994 ರಿಂದ ಸುಮಾರು 10–30 ವರ್ಷಗಳ ಹಿಂದಿ ನಿಂದಲೂ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇಲ್ಲ, ಹಿಂದೆ ಅದನ್ನು ಮಾಡಲಿಲ್ಲ. ಈಗ ಏನಾಗಿದೆ ಎಂದರೆ, ತಾವು ನಗರ ಪ್ರದೇಶ Corporation area ದಲ್ಲಿ 18 ಕಿ.ಮೀ. ಎಂದು ಹಾಕಿದ್ದೀರಿ. Municipal area ದಲ್ಲಿ 10 ಕಿ.ಮೀ. ಎಂದು ಹಾಕಿದ್ದೀರಿ. ಅದೇ ರೀತಿ, ಯಾರೋ ಒಬ್ಬರು–ಇಬ್ಬರು ಬಡವರು ಇದನ್ನು ಮಾಡಿದ್ದರೆ, ಅದನ್ನು ಬೇಕಾದರೆ ಕಟ್ಟುನಿಟ್ಟಾಗಿ ಇದನ್ನು ಮಾಡಿ. ನಾನು ಹೇಳುವುದು ಏನೆಂದರೆ, 10–20 ವರ್ಷಗಳಿಂದ ಮನೆಗಳನ್ನು

municipality area ದಲ್ಲಿ ಕಟ್ಟಿಕೊಂಡಿದ್ದಾರೆ. ಅವರಿಗೊಂದು ಹಕ್ಕುಪತ್ರ ಕೊಟ್ಟರೆ ಏನಾಗುತ್ತದೆ? ಸರ್ಕಾರಕ್ಕೆ ದುಡ್ಡೂ ಬರುತ್ತದೆ. ದಯಮಾಡಿ ಅದರಲ್ಲಿ ಇದನ್ನು ಸೇರಿಸಿಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇದಕ್ಕೆ ಯಾರಾದರೂ ವಿರೋಧ ಮಾಡಿದರೆ ನನ್ನದೇನೂ ಅಭ್ಯಂತರವಿಲ್ಲ. ನಗರ ಪ್ರದೇಶದವರು ಇರಬಹುದು, ಏಕೆಂದರೆ ಕಳೆದ 16 ವರ್ಷಗಳಿಂದ ನಡೆಯು ತ್ತಿರುವ ವಿಷಯ ಇದಾಗಿದೆ. ಮಾನ್ಯ ಸೋಮಣ್ಣನವರು ಇಲ್ಲೇ ಕುಳಿತಿದ್ದಾರೆ, ಅವರಿಗೆ ಇದು ಗೊತ್ತಿದೆ. ಆದ್ದರಿಂದ ನಾನು ಹೇಳುವುದು ಏನೆಂದರೆ, ಸನ್ಮಾನ್ಯ ಈಶ್ವರಪ್ಪನವರು ಇದನ್ನು ಈಗಲಾದರೂ ತಂದಿದ್ದಾರೆ, ಅದನ್ನು ಸ್ವಾಗತ ಮಾಡುತ್ತೇನೆ. ಮಾನ್ಯ ದೇವೇಗೌಡರು 1994 ರಲ್ಲೇ. . .

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ನಾವೇನು ಪ್ರಸ್ತಾಪ ಮಾಡಿದ್ದೇವೋ, ಇದನ್ನು ನಾವು 1999ರಲ್ಲೇ 98(ಸಿ)ಯನ್ನು ಮಾಡಿದ್ದೆವು. ಆಗ ಮಾನ್ಯ ಸಿದ್ಧರಾಮಯ್ಯನವರು Deputy Chief Minister ಆಗಿದ್ದರು. ಪ್ರಾಯಶಃ ಅಕ್ರಮವಾಗಿ ಏನು ಮನೆಗಳನ್ನು ಕಟ್ಟಿದ್ದಾರೆ, ಅದು ಬಿಡಿಎ acquisition ಆಗಿದ್ದರೂ ಕೂಡ, 20x30, 30x40 ಮತ್ತು 40x60 ಅಡಿ ಅಳತೆಯಲ್ಲಿ ಕಟ್ಟಿರತಕ್ಕಂಥ ಮನೆಗಳನ್ನು ಸಕ್ರಮ ಮಾಡಿದಗ, ಇದನ್ನು President of India ಗೆ ಒಂದೇ ಒಂದು ಬಿಲ್ ಅನ್ನು, ಈ ರಾಜ್ಯದ ಇತಿಹಾಸದಲ್ಲಿ ಕಳುಹಿಸಿಕೊಟ್ಟರು. ಆಗ ಅಲ್ಲಿಗೆ ಹೋದಮೇಲೆ, President of India ಕಛೇರಿಯಲ್ಲಿ ರಾಜ್ಯದ ಸಂಬಂಧಪಟ್ಟ ಅಧಿಕಾರಿಗಳ ಸಭೆ ಮಾಡಿ, ಅದನ್ನು approval ಮಾಡಿ, ಮತ್ತೆ ಕರ್ನಾಟಕಕ್ಕೆ ವಾಪಸ್ ಕಳುಹಿಸಿದರು. ಇದು ಒಳ್ಳೆಯ ಬಿಲ್ ಮಾಡಿ ಎಂದರು. ಅದನ್ನು ಇಡೀ ರಾಷ್ಟ್ರದ ಇನ್ನಿತರ ರಾಜ್ಯಗಳೂ ಕೂಡಾ, ಆ ಬಿಲ್ ಅನ್ನು ಅನ್ವಯಿಸಿದವು. ಅದಾದ ಮೇಲೆ, ಸನ್ಮಾನ್ಯ ಎಸ್.ಎಂ.ಕೃಷ್ಣ ಸಾಹೇಬರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಆ ಬಿಲ್ ಅನ್ನು implement ಮಾಡತಕ್ಕಂಥ ಸಂದರ್ಭದಲ್ಲಿ ಅದನ್ನು, ನನ್ನ ಮಿತ್ರರಾದ ಮಾನ್ಯ ಸುರೇಶ್ ಕುಮಾರ್‌ರವರು ಇಲ್ಲೇ ಇದ್ದಾರೆ, ಏನು ರಾಷ್ಟ್ರಪತಿಗಳಿಂದ ಅಂಗೀಕೃತವಾ ದಂತಹ ಆ ಒಂದು ಕಾಯ್ದೆಯನ್ನು, ಇಲ್ಲಿ ಕ್ಯಾಬಿನೆಟ್‌ನಲ್ಲಿಟ್ಟು, ಅದನ್ನು ತಿರಸ್ಕಾರ ಮಾಡಿರತಕ್ಕದ್ದು ಆಗಿರುವುದರಿಂದ, ನಾವು ಅದರ ಬಗ್ಗೆ ಸಾಕಷ್ಟು ಚರ್ಚೆ ಮಾಡಿ, ನಾನು ಮತ್ತು ಮಾನ್ಯ ಸುರೇಶ್‌ಕುಮಾರ್‌ರವರು, ಏನೆಲ್ಲಾ ಮಾಡಿ ಆ ಕಡತವನ್ನು ತರಿಸಿದಾಗ ಮಾನ್ಯ ರೇವಣ್ಣನವರೆ, ಅದು ಇವತ್ತು

ತಿರಸ್ಕೃತವಾಗಿದೆ. ಆದರೆ ಮತ್ತೆ ಆ ಬಿಲ್ ಅನ್ನು ತರಬೇಕಾದರೆ, ಮತ್ತೆ ಆ ಕಾಯ್ದೆಯನ್ನು ತರಬೇಕಾದರೆ ನಾವು ಮತ್ತೆ ಈ ಸದನದಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಅಕ್ರಮ ಸಕ್ರಮ ಮಾಡಿರತಕ್ಕದ್ದು, ಅದು ಬೇರೆಯಾದರೆ, ಈ 98(ಸಿ) ಮಾಡಿರುವುದರಿಂದ, ಹತ್ತಾರು ಕೋಟಿ ರೂ.ಗಳ ದುಡ್ಡು ಬರುವುದರ ಜೊತೆಯಲ್ಲಿ, ಸುಮಾರು ವರ್ಷಗಳಿಂದ ನೆನೆಗುದಿಗೆ ಬಿದ್ದಂತಹ ಸಮಸ್ಯೆ, ಏನು ಮಾನ್ಯ ರೇವಣ್ಣನವರು ಹೇಳಿದರು, ಮಾನ್ಯ ದೇವೇಗೌಡರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ, 'ಕೃಷ್ಣಾ'ದಲ್ಲಿ ರಾತ್ರಿ 6 ಗಂಟೆಯಿಂದ, ಬೆಳಗಿನ ಜಾವದವರೆಗೂ ಕೂಡ, ಸುಮಾರು ಐದಾರು ಸಾವಿರ ಹೆಣ್ಣುಮಕ್ಕಳು ಧರಣಿ ನಡೆಸಿರತಕ್ಕಂಥ ಉದಾಹರಣೆ ಇದೆ. ಇದೆಲ್ಲಾ ಇದ್ದಾಗ, ನಾನು ತಮ್ಮ ಮೂಲಕ ಸದನಕ್ಕೆ ತಿಳಿಸುವುದು ಇಷ್ಟೇ. 98(ಸಿ) ಆಗಿತ್ತು, ಅದು ಕೇಂದ್ರ ಸರ್ಕಾರದ ಮೂಲಕ ಘನತೆವೆತ್ತ ರಾಷ್ಟ್ರಪತಿಗಳಿಗೆ ಹೋಗಿ ಬಂದಂತಹ ಒಂದು ಕಾಯ್ದೆಯನ್ನು ಇಲ್ಲಿ cancel ಮಾಡಿದ್ದರಿಂದ, ಮತ್ತೊಮ್ಮೆ ಆ ಕಾಯ್ದೆಯನ್ನು ತಂದರೆ, ಅದನ್ನು implement ಮಾಡಬಹುದೇ ವಿನಃ, ಈ ಒಂದು ಇದರೊಳಗೆ ಅದನ್ನು ಮಾಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಕೆ. ರಘುಪತಿ ಭಟ್ : 2001 ರಲ್ಲಿ ಮಾಡಿದಾಗ ನಗರವೂ ಸೇರಿತ್ತು. ತಾವು ತಪ್ಪು ಅಭಿಪ್ರಾಯ ಹೇಳುತ್ತಿದ್ದೀರಿ. 2001ರಲ್ಲಿ ಮಾಡಿದಾಗ 94(ಸಿ)ಯಲ್ಲಿ ನಗರವೂ ಸೇರಿತ್ತು. ಈಗ ಏಕೆ ಆಗುವುದಿಲ್ಲ? 2001 ರಲ್ಲಿ ಮಾಡಿದಾಗ ನಗರವಿತ್ತು ಸಾರ್. ಸದನಕ್ಕೆ ತಪ್ಪು ಅಭಿಪ್ರಾಯ ಹೇಳಬೇಡಿ. 2001 ರಲ್ಲಿ ನಗರವೂ ಸೇರಿಕೊಂಡಿತ್ತು. ಎಸ್.ಎಂ. ಕೃಷ್ಣ ಸರ್ಕಾರವಿದ್ದಾಗ ಮಾಡಿದ್ದರಲ್ಲಿ ನಗರಸಭೆ ಮತ್ತು ಪೌರಾಡಳಿತ ಸೇರಿತ್ತು. ಈಗ್ಯಾಕೆ ನಗರವನ್ನು ಬಿಟ್ಟು ಕೇವಲ ಪಂಚಾಯಿತಿಯದ್ದನ್ನು ಮಾತ್ರ ಮಾಡುತ್ತಿದ್ದೀರಿ? ಹಿಂದೆ ಬೆಂಗಳೂರು ಸೇರಿಸಿಯು ಇತ್ತು. 2001ರಲ್ಲಿ ಮಾಡಿದಾಗ ನಗರ ಸೇರಿತ್ತು, ಈಗ ಬಿಟ್ಟಿದ್ದು ತಪ್ಪಾಗಿದೆ.

(ಗೊಂದಲ)

ಶ್ರೀ ವೆಂಕಟರಮಣಪ್ಪ : 2001 ರಲ್ಲಿ ಮನೆಗಳ ಅಕ್ರಮ ಸಕ್ರಮ ಮಾಡುವುದಕ್ಕಾಗಿ ತಂದಿತ್ತು.

(ಗೊಂದಲ)

ಶ್ರೀ ಬಿ. ರಮಾನಾಥ್ ರೈ : ನಗರದಲ್ಲಿ ಮೌಲ್ಯ ಜಾಸ್ತಿ ಎಂಬ ಕಾರಣಕ್ಕಾಗಿ ಕೆಲವು ಜನರು ಆ ಕಾಲದಲ್ಲಿ ಮನೆಯನ್ನು ಕಟ್ಟಿಕೊಳ್ಳಲಿಲ್ಲ. ಆಗ

ನಗರ ವ್ಯಾಪ್ತಿಗೆ ಬರುತ್ತಿತ್ತು. ಆದರೆ ಆಗ ನಗರಕ್ಕೆ ಮೌಲ್ಯ ಜಾಸ್ತಿ ಹಾಕಿದ್ದರು. ಅವರು ಆ ಜಾಗದಲ್ಲಿ ಕಟ್ಟಿಕೊಳ್ಳದ್ದರಿಂದ, ಅವರನ್ನು ಅಲ್ಲಿಂದ ಹೊಡೆದೋಡಿಸಿದರು.

(ಗೊಂದಲ)

ಶ್ರೀ ಕೆ. ರಘುಪತಿ ಭಟ್ : 2001 ರಲ್ಲಿ ನಗರ ಪ್ರದೇಶಕ್ಕೆ ಒಂದೂ ಮುಕ್ಕಾಲು ಸೆಂಟ್ free, ಗ್ರಾಮೀಣ ಪ್ರದೇಶಕ್ಕೆ ಮೂರು ಸೆಂಟ್ free ಇತ್ತು.

ಶ್ರೀ ಎಸ್. ಸುರೇಶ್ ಕುಮರ್ : ಮಾನ್ಯ ಸಭಾಧ್ಯಕ್ಷರೆ, ಹಿಂದೆ ಅವರು ಹೇಳಿದಂತೆ, 2001ರಲ್ಲಿ ನಗರ ಪ್ರದೇಶಗಳ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಇಲ್ಲೂ ಕೂಡ ಈ ವಿಚಾರ ಚರ್ಚೆಗೆ ಬಂದಿತ್ತು. ಈಗ ನನಗೆ ಗೊತ್ತು ನಗರ ಪ್ರದೇಶಗಳಲ್ಲಿ ಈ ಲ್ಯಾಂಡ್ ಅನ್ನು ಯಾರ್ಯಾರು ಯಾವ್ಯಾವ ರೀತಿಯಲ್ಲಿ ಮಾಡಿದ್ದಾರೆಂದು. ನಾವು ಈಗ ಅದರಲ್ಲಿ 2400 Sq. ft. ಎಂದು ಇಟ್ಟುಕೊಂಡಿದ್ದೇವೆ, that is 60' X 40'. You just imagine the value of 60' X 40' land in Bangalore, in Mysore, in Tumkur. So, ನಾವು ಇದನ್ನೂ ಕೂಡ ಲೆಕ್ಕ ಹಾಕಿದ್ದೇವೆ. ಈಗ ಮೊದಲನೇ ಹಂತಕ್ಕೆ ಸನ್ಮಾನ್ಯ ಕಂದಾಯ ಸಚಿವರು, ಉಪ ಮುಖ್ಯಮಂತ್ರಿಗಳು ಈ ಒಂದು subject ಅನ್ನು ತಂದಿದ್ದಾರೆ. ನಾವು ನಗರ ಪ್ರದೇಶಗಳಿಗೂ ಕೂಡ ಯೋಚನೆ ಮಾಡಿ, ಸೂಕ್ತವಾದ ಒಂದು ಕಾನೂನನ್ನು ನಾವು ತರುತ್ತೇವೆ.

ಶ್ರೀ ಬಿ.ರಮಾನಾಥ ರೈ : ಬೆಂಗಳೂರು ಬಿಬಿಎಂಪಿ ವ್ಯಾಪ್ತಿಯನ್ನು ಹೊರತುಪಡಿಸಿ, ಬೇರೆ ಕಡೆ ಮಾಡಬಹುದು.

(ಗೊಂದಲ)

ಶ್ರೀ ಕೆ. ರಘುಪತಿ ಭಟ್ : ಮನೆಗಳನ್ನು ಕಟ್ಟಿಕೊಂಡು ಕುಳಿತಿರುವವರು ಏನು ಮಾಡಬೇಕು ಸಾರ್? ಮಾನ್ಯ ಈಶ್ವರಪ್ಪನವರೆ, ನಿಮ್ಮ ಕ್ಷೇತ್ರ ಶಿವಮೊಗ್ಗದಲ್ಲಿದೆ. ಇದನ್ನು ಮಾಡದಿದ್ದರೆ, ನೀವು ಮಂತ್ರಿಗಳಾಗಿ ಇದನ್ನೂ ಕೂಡ ಅವರಿಗೆ ಕೊಡಲಿಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಜೆ.ಕೃಷ್ಣ ಪಾಲೇಮಾರ್ : ಅದನ್ನು ಇದರಲ್ಲಿ ತರಲೇಬೇಕು. ಇಲ್ಲದಿದ್ದರೆ ವಾಕೌಟ್ ಮಾಡುತ್ತೇವೆ.

(ಗೊಂದಲ)

ಶ್ರೀ ಜೆ. ಕೃಷ್ಣ ಪಾಲೇಮಾರ್ : ನಾವು ಅದನ್ನು ವಿರೋಧ ಮಾಡುತ್ತೇವೆ, ನಾವು ವಾಕೌಟ್ ಮಾಡುತ್ತೇವೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಇಡೀ ಸದನದ ಎಲ್ಲಾ ಶಾಸಕರ ಅಭಿಪ್ರಾಯ ಅರ್ಥವಾಗಿದೆ. ಇವತ್ತೇನು ಗ್ರಾಮೀಣ ಪ್ರದೇಶದಲ್ಲಿ ಇರುವಂತಹ ಆ ಬಡವರಿಗೆ, ಮನೆ ಕಟ್ಟಿಕೊಂಡಿರುವಂತಹ ಬಡವರಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಈ ಬಿಲ್ ತರಲಾಗಿದೆ. ಖಂಡಿತ ವಾಗಿಯೂ, ತಾವೆಲ್ಲಾ ಇವತ್ತೇನು ಪ್ರಸ್ತಾಪ ಮಾಡುತ್ತಿದ್ದೀರೋ, ಇದಕ್ಕೆ ತುರ್ತಾಗಿ ನಾವು ಕುಳಿತು ಚರ್ಚೆ ಮಾಡಿ, ನಗರ ಪ್ರದೇಶದಲ್ಲಿ ವಾಸ ಮಾಡುತ್ತಿರುವಂತಹವರಿಗೂ ಕೂಡ ಖಂಡಿತವಾಗಿ ಬಿಲ್‌ವೊಂದನ್ನು ತರುತ್ತೇವೆ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಇದರ ಜೊತೆಗೆ ಅದನ್ನು ಮಿಕ್ಸ್ ಮಾಡುವುದಕ್ಕಾಗುವುದಿಲ್ಲ. ಬೇರೆಯದನ್ನು ತರುತ್ತೇವೆ, ಖಂಡಿತವಾಗಿಯೂ ಮಾಡುತ್ತೇವೆ, ತಾವು ಅವಕಾಶ ಮಾಡಿಕೊಡಿ.

ಶ್ರೀ ಕೆ. ರಘುಪತಿ ಭಟ್ : ಇದನ್ನೇ ನಗರಕ್ಕೆ extend ಮಾಡಿ. ನೀವು ಇನ್ನು ಯಾವಾಗ ತರುತ್ತೀರಿ? ಇನ್ನು ಯಾವಾಗ ಅಧಿವೇಶನ ನಡೆಯುತ್ತದೋ? ಇಷ್ಟರಲ್ಲೇ ನಮ್ಮ term ಮುಗಿಯುತ್ತದೆ. ಬಿಲ್ ತಂದು, ಅದು ಪಾಸಾಗಿ ನಾವು ಇನ್ನೆಲ್ಲಿ ಹಕ್ಕುಪತ್ರಗಳನ್ನು ಕೊಡಲಿಕ್ಕಾಗುತ್ತದೆ? ಇನ್ನೊಂದು ಬಿಲ್‌ನಲ್ಲಿ ಇನ್ನೊಂದು ಅಧಿವೇಶನದಲ್ಲಿ ಮತ್ತೊಮ್ಮೆ ತಂದರೆ, ನಾವು ಹಕ್ಕುಪತ್ರಗಳನ್ನು ಕೊಡಲಿಕ್ಕಾಗುವುದಿಲ್ಲ. ನಗರ ಕಿ.ಮೀ. extend ಕಡಿಮೆ ಮಾಡಿ, ಇದನ್ನೇ ಮಾಡಿ. ಕೇವಲ ಅಧಿಕಾರಿಗಳ ಮಾತನ್ನು ಕೇಳಿಕೊಂಡು ದಯವಿಟ್ಟು ಮಾಡಬೇಡಿ. ಇದು ಬಹಳ ಪ್ರಾಮುಖ್ಯವಾದಂತಹ ವಿಷಯ. ದಯವಿಟ್ಟು ನಗರವನ್ನೂ ಸೇರಿಸಿಕೊಂಡು ಮಾಡಬೇಕು. ಇಲ್ಲದಿದ್ದರೆ ಈ ಬಿಲ್ ಅನ್ನು ನಾವು ವಿರೋಧ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ, ನೀವು ಆಡಳಿತ ಪಕ್ಷದವರಾಗಿ ಈ ತರಹ ಮಾತನಾಡುತ್ತೀರಲ್ಲಾ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನಗರ ಪ್ರದೇಶದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಖಂಡಿತವಾಗಿಯೂ serious ಆಗಿ ಯೋಚನೆ ಮಾಡಿ, ಆ ಬಗ್ಗೆ ತರುತ್ತೇವೆ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಸರ್ಕಾರಿ ಜಮೀನು ಯಾವುದು ಎಂಬ ಬಗ್ಗೆ ವಿವರಣೆ ನೀಡಿ. ಸರ್ಕಾರಿ ಭೂಮಿ ಎಂದರೆ ಅದಕ್ಕೆ definition ಬೇಡವೆ?

(ಗೊಂದಲ)

ಅಧ್ಯಕ್ಷರು : ಆಯಿತು, ಇದು ಮುಗಿಯದ ಚರ್ಚೆಯಾಗುತ್ತದೆ.

ಶ್ರೀ ಕೃಷ್ಣ ಬೈರೇಗೌಡ (ಬ್ಯಾಟರಾಯನಪುರ) : ಎರಡು ನಿಮಿಷ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಎದ್ದು ನಿಂತುಕೊಂಡರೆ ಹೇಗೆ?

ಶ್ರೀ ಹೆಚ್.ಡಿ. ರೇವಣ್ಣ : ನಾನು ಮಾತನಾಡುತ್ತೇನೆ. ತಾವು ಆ ಮೇಲೆ ಮಾತನಾಡಿ ಸರ್.

(ಗೊಂದಲ)

ಅಧ್ಯಕ್ಷರು : ನೀವು ಮಾತನಾಡಿ, ಇದು different issue ಆಗುತ್ತದೆ. ನೀವು ಸುಮ್ಮನೆ ಅಲ್ಲಿಗೆ ಹೋಗಿ reject ಮಾಡಿಕೊಂಡು ತರುತ್ತೀರಿ. ಹಿಂದೆ ಮುಂದೆ ಯೋಚನೆ ಮಾಡದೆ, ನಗರ ನಗರ ಎಂದು ಏಕೆ ಹೇಳುತ್ತಿದ್ದೀರಿ? ಮಾನ್ಯ ರಾಜ್ಯಪಾಲರ ಅಂಕಿತ ಬೇಡವೇ? That is a separate issue.

ಶ್ರೀ ಕೆ. ರಘುಪತಿ ಭಟ್ : 2001 ರಲ್ಲಿ ಮಾಡುವಾಗ ನಗರ ಎಂದು ಇತ್ತು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ನಿಮಗೆ ಒಳ್ಳೆಯದು ಆಗಲಿ ಎಂದು, ನಿಮಗೆ ನಗರ ಪ್ರದೇಶದ ಜನ ನಿಮಗೆ ಓಟು ಹಾಕುತ್ತಾರೆ. ಮಾನ್ಯ ದೇವೇಗೌಡರು ಬಡವರ ಬಗ್ಗೆ ಕಾಳಜಿ ಇಟ್ಟುಕೊಂಡು 1994 ರಲ್ಲಿ ತರಬೇಕೆಂದು ಇದ್ದರು ಅದನ್ನು ಮಾನ್ಯ ಸೋಮಣ್ಣನವರು ಒಪ್ಪಿಕೊಂಡಿದ್ದಾರೆ. ಆದ್ದರಿಂದ ನಾನು ಹೇಳುವುದು.

ಮಾನ್ಯ ವಸತಿ ಮಂತ್ರಿಗಳೇ ಹೇಳುತ್ತಿದ್ದಾರೆ. 5000 ಜನರು ರಾತ್ರಿ 3 ಗಂಟೆಯವರೆಗೆ ಧರಣಿ ಮಾಡಿದರು ಎಂದು ಹೇಳುತ್ತಿದ್ದಾರೆ. ನಾನು ಆಡಳಿತ ಪಕ್ಷದ ಸದಸ್ಯರ ಪರವಾಗಿ ಮಾತನಾಡುತ್ತಿದ್ದೇನೆ, ಬೇಡವೆಂದರೆ ಬಿಟ್ಟು ಹಾಕಿ. ನಿಮಗೆ ನಗರ ಪ್ರದೇಶದ ವೋಟು ಬೇಡವೆಂದರೆ, ಬಿಟ್ಟು ಹಾಕಿ ನಾವು ಬೇಡವೆಂದು ಅನ್ನುವುದಿಲ್ಲ. 1994 ರಲ್ಲಿ ಮಾನ್ಯ ದೇವೇಗೌಡರು ಬಡವರ ಬಗ್ಗೆ ಕಾಳಜಿ ಇಟ್ಟುಕೊಂಡು ಹೋರಾಟ ಮಾಡಿದ್ದಾರೆ. ಆದ್ದರಿಂದ ದಯಮಾಡಿ ಇವತ್ತು ವಸತಿ ಸಚಿವರು ಸಭೆಗೆ ಸತ್ಯವನ್ನು ತಿಳಿಸಿದ್ದಾರೆ. ಆದ್ದರಿಂದ 1994 ರಿಂದ ಇರುವ ಹೋರಾಟಕ್ಕೆ ಮಾನ್ಯ ಈಶ್ವರಪ್ಪನವರು ಇವತ್ತು ಮುಕ್ತಿ ಹಾಡುತ್ತಿದ್ದಾರೆ. ಅವರಿಗೆ ಒಳ್ಳೆಯ ಹೆಸರು ಬರಬೇಕೆಂದರೆ ಸೇರಿಸಿ. ಇದನ್ನು 18 ಕಿ.ಮೀ. ಕಾರ್ಪೊರೇಶನ್ ವ್ಯಾಪ್ತಿ ಎಂದು ಹಾಕಿಕೊಳ್ಳಿ. ನೀವು 2400 ಚ.ಅ. ಕೊಡಬೇಡಿ. ಮಾನ್ಯ ಕಾನೂನು ಮಂತ್ರಿಗಳು 2400 ಚ.ಅ. ಎಂದು ಅನ್ನುತ್ತಿದ್ದಾರೆ. ಬಡವರಿಗೆ ನಗರ ಪ್ರದೇಶದಲ್ಲಿ 20' x 30' ಕೊಡಿ ಸ್ವಾಮಿ, ಇಲ್ಲ 20'x 20' ಕೊಡಿ ಸ್ವಾಮಿ. ಪಾಪ ಅವರು ಗುಡಿಸಲು ಹಾಕಿಕೊಂಡಿದ್ದಾರೆ. 20–30 ವರ್ಷದಿಂದ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಇದರಲ್ಲಿ ನೀವು 18 ಕಿ.ಮೀ. ವ್ಯಾಪ್ತಿ ಎಂದು ಅನ್ನುತ್ತಿದ್ದೀರಿ, ಇಲ್ಲಿ ನಗರ ಪ್ರದೇಶ, ಮುನಿಸಿಪಾಲಿಟಿ ಏರಿಯಾ 10. ಕಿ.ಮೀ. ಎಂದು ಹೇಳುತ್ತಿದ್ದೀರಿ. ಮುನಿಸಿಪಾಲಿಟಿ ಏರಿಯಾ 5 ಕಿ.ಮೀ. ಎಂದು ಇರುವುದನ್ನು ಚೇಂಜ್ ಮಾಡುವುದು ಏನು ದೊಡ್ಡ ವಿಷಯವೆ? ಉದಾಹರಣೆಗೆ ಹೇಳುವುದಾದರೆ ಮಾನ್ಯ ಕೃಷಿ ಸಚಿವರು ಹಾಸನ ಬಿಟ್ಟು ಮಾಡುತ್ತೇವೆಂದು ಅಂದರು. ಅದೇ ರೀತಿ ಇವತ್ತು ಈ ತರಹ ಸೇರಿಸಿಕೊಂಡು ಮಾಡುತ್ತೇವೆಂದು ಹೇಳಿದರೆ ಮುಗಿದು ಹೋಗುತ್ತದೆ. ನಗರ ಪ್ರದೇಶದ ವೋಟು ಬೇಕೆಂದರೆ ನೀವು ಮಾಡಿ. ಮಾನ್ಯ ಈಶ್ವರಪ್ಪನವರಿಗೆ ಒಳ್ಳೆಯ ಹೆಸರು ಬರಬೇಕೆಂದರೆ ಮಾಡಿ. ನೀವು ಮಾಡಿ ಸ್ವಾಮಿ ನಾವು ನಿಮಗೆ ಒಪ್ಪಿಗೆ ಕೊಡುತ್ತಿದ್ದೇವೆ. ಮಾಡಬೇಕೋ ಬೇಡವೋ ಹೇಳಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಖಂಡಿತವಾಗಿ ಮಾಡುತ್ತೇವೆ, ಅದಕ್ಕೂ ಇದಕ್ಕೂ mix ಮಾಡಬೇಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನಮ್ಮ ಬೆಂಬಲ ಇದೆ, ಇದಕ್ಕೆ ನಗರ ಪ್ರದೇಶವೆಂದು ಸೇರಿಸಲೇಬೇಕು.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ : ನಮ್ಮ ರೇವಣ್ಣನವರು ಪುರಾತನ ಕಾಲಕ್ಕೆ ಹೋಗುತ್ತಿದ್ದಾರೆ. ನೀವು 1994ನೇ ಇಸ್ವಿಯ ಬಗ್ಗೆ ಮಾತನಾಡುತ್ತಿದ್ದೀರಿಲ್ಲಾ?

(ಗೊಂದಲ)

ಅಧ್ಯಕ್ಷರು : ಎಲ್ಲರೂ ಈ ತರಹ ಮಾತನಾಡಿದರೆ ಹೇಗೆ?

ಶ್ರೀ ಕೃಷ್ಣ ಬೈರೇಗೌಡ : ರೇವಣ್ಣನವರು ಹಿಂದೆ ಹೋಗುತ್ತಿದ್ದಾರೆ, ನಾವು ಮುಂದೆ ಹೋಗುತ್ತಿದ್ದೇವೆ.

ಶ್ರೀ ಬಿ. ರಮಾನಾಥ್ ರೈ : 1994ರ ವಿಷಯ ಬೇಡ. 2001 ರಲ್ಲಿ ಮಾನ್ಯ ಎಸ್.ಎಂ. ಕೃಷ್ಣರವರು ಇದ್ದಾಗ ನಗರ ವ್ಯಾಪ್ತಿಗೆ ಮಾಡಿದೆ.

ಶ್ರೀ ಬಂಡೆಪ್ಪ ಖಾಶೆಂಪೂರ್ : ಮಾನ್ಯ ಎಸ್.ಎಂ. ಕೃಷ್ಣರವರು ಮಾಡಿದ್ದು ಹೇಳಿ, 1994 ರಲ್ಲಿ ಮಾಡಿದ್ದು ಹೇಳಿ.

ಶ್ರೀ ಬಿ. ರಮಾನಾಥ್ ರೈ : 2001 ರಲ್ಲಿ ಮೌಲ್ಯ ಜಾಸ್ತಿ ಮಾಡಿದರು, ಈ ತಿದ್ದುಪಡಿಯನ್ನು ನಾವು ಸ್ವಾಗತ ಮಾಡುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್ : ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ನಗರ ಪ್ರದೇಶಗಳಿಗೆ ಈಗ ಇರುವ ಬಿಲ್‌ನಲ್ಲಿ ತರುವುದಕ್ಕೆ ಆಗುವುದಿಲ್ಲ. ನಾವು ಮಾಡುತ್ತಿರುವುದು Revenue Act. ಖಂಡಿತವಾಗಿ ಈ ಒಂದು ಅನುಭವದ ಹಿನ್ನೆಲೆಯಲ್ಲಿ ನಗರ ಮತ್ತು ಪಟ್ಟಣ ಪ್ರದೇಶಗಳಿಗೆ ಸೂಕ್ತವಾದ ಒಂದು ತಿದ್ದುಪಡಿಯನ್ನು ನಾವು ತರುತ್ತೇವೆ.

(ಗೊಂದಲ)

ಅಧ್ಯಕ್ಷರು : ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಅವಕಾಶವನ್ನು ಕೊಡಿ. Town Panchayath ಗೆ ಹೊಂದಿಕೊಂಡು ಗ್ರಾಮ ಪಂಚಾಯತಿಗಳು ಇದೆ. ಆ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಕೊಡಿ. ಇಲ್ಲದಿದ್ದರೆ, ಅವರು ಏನು ಅನ್ಯಾಯ ಮಾಡಿದ್ದಾರೆ? ಅಲ್ಲಿಗೆ 3 ಕಿ.ಮೀ. ನೀವು ಹಾಕಿದರೆ ಪಾಪ ಅವರು ಏನು ಅನ್ಯಾಯ ಮಾಡಿದರು? ದಯವಿಟ್ಟು ಅದನ್ನು ಹೇಳಿಬಿಡಿ.

ಶ್ರೀ ಕೃಷ್ಣ ಬೈರೇಗೌಡ (ಬ್ಯಾಟರಾಯನಪುರ) : ಮಾನ್ಯ ಅಧ್ಯಕ್ಷರೆ, ದಯವಿಟ್ಟು ಎರಡು ನಿಮಿಷ ಮಾತನಾಡುತ್ತೇನೆ, ನಾನು ಆಗಿನಿಂದ ಕೇಳುತ್ತಿದ್ದೇನೆ. ಇದರ ಬಗ್ಗೆ ಬಹಳ ಜನ ಸದಸ್ಯರು ಸಲಹೆಗಳನ್ನು

ಕೊಟ್ಟಿದ್ದಾರೆ. ಇದು ನನ್ನ ವೈಯಕ್ತಿಕ ಅಲ್ಲ. ಎಲ್ಲಾ ಸದಸ್ಯರಲ್ಲಿ ನಾನು ಬಹಳ ವಿನಯವಾಗಿ ಪ್ರಾರ್ಥನೆ ಮಾಡುತ್ತೇನೆ. ಇವತ್ತು ನಿಮಗೆ ಬೇಕಾದರೆ ಬಿಲ್ ಪಾಸ್ ಮಾಡಿಕೊಡುತ್ತೇವೆ. ಆದರೆ ಕೆಲವರಿಗೆ ನೀವು ಸುಣ್ಣ ಇಡುವುದು, ಕೆಲವರಿಗೆ ಬೆಣ್ಣೆ ಇಡುವುದು ದಯವಿಟ್ಟು ಮಾಡಬೇಡಿ. ನೀವೇ ಹೇಳುತ್ತಿದ್ದೀರಿ ಅದು ಹಿಂದೆ ಆಗಿದೆ, ಮಾನ್ಯ ಸೋಮಣ್ಣನವರು ಸಾಕ್ಷಿ ಇದ್ದಾರೆ. ದಯವಿಟ್ಟು ನಮ್ಮ ಅಹವಾಲನ್ನು ಕೇಳಿಸಿಕೊಳ್ಳಿ. ಇವತ್ತು ಬೆಂಗಳೂರು ನಗರ ಜಿಲ್ಲೆ ಆಗಬಹುದು, ಅದೇ ತರಹ ರಾಜ್ಯದ ಬೆಳಗಾವಿ ಆಗಬಹುದು, ಮಂಗಳೂರು ಆಗಬಹುದು. ಎಲ್ಲ ಕಡೆಯೂ ಸಹ ಇವತ್ತು ಅವರು ಮನೆಗಳನ್ನು ಕಟ್ಟಿಕೊಂಡು ಬಿಟ್ಟಿದ್ದಾರೆ. ಇವತ್ತು ಇದೇ ಆಕ್ಟ್‌ದೊಳಗೆ ನೀವು ಇನ್ನು ಮುಂದೆ ಯಾವ ಸರ್ಕಾರಿ ಜಮೀನಿನಲ್ಲಿಯೂ ಸಹ ಮನೆ ಕಟ್ಟುವುದಕ್ಕೆ ಬಿಡುವುದಿಲ್ಲ ವೆಂದು ಹೇಳಿ ಬಿಲ್ ತೆಗೆದುಕೊಂಡು ಬನ್ನಿ ನಾನಂತೂ ವೈಯಕ್ತಿಕವಾಗಿ ಸಪೋರ್ಟ್ ಮಾಡುತ್ತೇನೆ. ಆದರೆ ಈಗ ಅವರು ಮನೆ ಕಟ್ಟಿಕೊಂಡು ಬಿಟ್ಟಿದ್ದಾರೆ. ದಯವಿಟ್ಟು ಇಲ್ಲಿ ನೀವು ಒಂದು ತಿರ್ಮಾನ ಮಾಡಿ. Budgetary constraints ಇಲ್ಲದೆ ಎಷ್ಟು Government land ಇದೆ ಅಷ್ಟಕ್ಕೂ ನೀವು compound ಹಾಕುತ್ತೇವೆಂದು ಇದರಲ್ಲಿ ನೀವು ಸೇರಿಸಿ ನಾನಂತೂ ಸಪೋರ್ಟ್ ಮಾಡುತ್ತೇನೆ. ಎಲ್ಲಾ members ಕೂಡ support ಮಾಡುತ್ತಾರೆ. ಮನೆ ಕಟ್ಟುವುದಕ್ಕೆ ನಾವು ಪರೋಕ್ಷವಾಗಿ encourage ಮಾಡಿ ಬಿಟ್ಟಿದ್ದೇವೆ. ಇವತ್ತು ನೀವು ಅವರಿಗೆ ತ್ರಿಶಂಕು ಸ್ಥಿತಿಯಲ್ಲಿ ಹಾಗೆ ಬಿಡುತ್ತೇವೆಂದು ಹೇಳಿದರೆ ಇದು ಯಾವ ನ್ಯಾಯ ಸರ್? ಹೋಗ್ಲಿ, demolition ಮಾಡುತ್ತೀರಾ ಹೇಳಿ. ಅವರನ್ನು evict ಮಾಡುತ್ತೀರಾ ಹೇಳಿ. ಮಾನ್ಯ ಕಂದಾಯ ಸಚಿವರ ಗಮನಕ್ಕೆ, ಯಾರೋ ನನ್ನಂತಹ ಪುಡಾರಿಗಳು ಅನೇಕ ಜನ ಇರುತ್ತಾರೆ. ಅವರು ಏನು ಮಾಡುತ್ತಾರೆಂದರೆ, ಮಾನ್ಯ ಸೋಮಣ್ಣನವರೆ, ತಹಶೀಲ್ದಾರ್‌ಗೆ ಹೋಗಿ ಒಂದು ಅರ್ಜಿಯನ್ನು ಕೊಡುತ್ತಾರೆ. ತಹಶೀಲ್ದಾರ್‌ಗೆ ಅರ್ಜಿಯನ್ನು ಕೊಟ್ಟರೆ ನಿಮ್ಮ ಮನೆಯನ್ನು ಏಕೆ demolition ಮಾಡಬಾರದೆಂದು ಒಂದು notice ಕೊಡುತ್ತಾರೆ. ಸರ್ಕಾರಿ ಜಾಗದಲ್ಲಿ ಮನೆ ಕಟ್ಟಿಕೊಂಡಿರುವವರು ಎಲ್ಲರೂ ಬಡವರು ಸ್ವಾಮಿ. ಆ ಮನೆಯ ಹೆಂಚು ಯಾವಾಗ ಬೀಳುತ್ತದೆಂದು ಅವನು ದಿನಾಲು ರಾತ್ರಿ ನಿದ್ದೆ ಮಾಡುವುದು ಬಿಟ್ಟು tension ನಲ್ಲಿ ಅವನ ಆರೋಗ್ಯ ಹಾಳಾಗುತ್ತದೆ. ನನ್ನಂತಹ ಪುಢಾರಿಗಳು ಮಾಡುವ ಕೆಲಸ ದಯವಿಟ್ಟು ಅದಕ್ಕೋಸ್ಕರ ನಾವು

ಎಷ್ಟೇ ಜನ ಹೇಳಿದರೂ ವಿಚಾರ ಇಷ್ಟೆ. ನಾವು ಇದನ್ನು ಸ್ವಾಗತ ಮಾಡುತ್ತೇವೆ. ಅದರ ಜೊತೆಗೆ ಅಲ್ಲಿರುವವರಿಗೆ ನೀವು ಒಂದು ಗತಿ ಕಾಣಿಸಿ. ಅದಕ್ಕೆ ಏನು ಬೇಕೋ ಮಾಡಿ. ಅದನ್ನು ಇವತ್ತೇ ಮಾಡಿ, ಅದನ್ನು ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಇವರಿಗೆ ಮಾಡಿ ಅವರಿಗೆ ಬಿಟ್ಟರೆ ಅನ್ಯಾಯವಾಗುತ್ತದೆ. ಅವರು ಏನಾಗಬೇಕು? ಇವತ್ತು ನೀವು ಕಡಿಮೆ ಜನ ಎಂದು ಹೇಳುತ್ತೀರಿ. ನನ್ನ ಒಂದೇ ಕ್ಷೇತ್ರದಲ್ಲಿ 4 ರಿಂದ 5 ಸಾವಿರ ಜನ ಇದ್ದಾರೆ. ಅವರಿಗೆಲ್ಲ ನಾನು ನಾಳೆ ಹೋಗಿ ಏನಂತ ಮುಖ ತೋರಿಸಲಿ? ಇಲ್ಲಾ ನಿಮಗೆ ಏನೂ ಮಾಡುವುದಕ್ಕಾಗುವುದಿಲ್ಲ, ರಾಜ್ಯದಲ್ಲಿ ಉಳಿದಿರುವ ವರಿಗೆಲ್ಲಾ ನಾನು ಅನುಕೂಲ ಮಾಡಿಕೊಟ್ಟಿದ್ದೇನೆ, ಸರ್ಕಾರಕ್ಕೆ ಸಹಕಾರ ಮಾಡಿದ್ದೇನೆಂದು ಹೇಳಿದರೆ ತಮ್ಮ ಕ್ಷೇತ್ರದಲ್ಲಿ ಇನ್ನುಳಿದ ಶಾಸಕರುಗಳು ಏನು ಉತ್ತರ ಕೊಡಬೇಕು ದಯವಿಟ್ಟು ಹೇಳಿ. ರಾಜ್ಯಕ್ಕೆಲ್ಲಾ ಮಾಡಿ ಕೊಡುತ್ತೀರಿ, ನಮಗೆಲ್ಲಾ ಏಕೆ ಮಾಡಿಕೊಡುವುದಿಲ್ಲವೆಂದು ಹೇಳಿದರೆ ನಾವು ಏನು ಉತ್ತರ ಕೊಡೋಣ. ಈಗ ಅಧಿಕಾರಿಗಳು ಇದ್ದಾರೆ. ಕಾನೂನು ಈ ತರಹ ಇದೆ, ಆ ತರಹ ಇದೆ ಎಂದು ಅವರು ಬಂದು ಉತ್ತರವನ್ನು ಕೊಡಲಿ. ನಾವು ಕ್ಷೇತ್ರದಲ್ಲಿ ಹೋಗಿ ಉತ್ತರವನ್ನು ಕೊಡುವುದಕ್ಕೆ ಸಾಧ್ಯವೇ ಹೇಳಿ ಸ್ವಾಮಿ. ನಾವು ಹಿಂದೆ CMC ವ್ಯಾಪ್ತಿಯಲ್ಲಿ ಮಾಡಿದ್ದೇವೆ. ಹಿಂದೆ ಎಸ್.ಎಂ.ಕೃಷ್ಣ ರವರ ಕಾಲದಲ್ಲಿಯೂ ಆಗಿದೆ. ಅದರ ಹಿಂದಿನ ಕಾಲದಲ್ಲಿಯೂ ಸಹ ಆಗಿದೆ. CMC ವ್ಯಾಪ್ತಿಯಲ್ಲಿ ಕೊಟ್ಟಿದ್ದೇವಲ್ಲವೆ? ನನ್ನ ಕ್ಷೇತ್ರದ ಬ್ಯಾಟರಾಯನ ಪುರ CMC ವ್ಯಾಪ್ತಿಯಲ್ಲಿಯೇ ಇವತ್ತಿಗೂ ಕೊಡುತ್ತಿದ್ದೇವೆ. 94ಸಿ ಯಲ್ಲಿ ಈ ಹಿಂದೆ ಅರ್ಜಿ ಹಾಕಿದಂಥದ್ದಕ್ಕೆ ವಿಲೇವಾರಿ ಆಗದೆ ಉಳಿದಿರತಕ್ಕಂಥವುಗಳು ಇವತ್ತಿಗೂ ವಿಲೇವಾರಿ ಆಗುತ್ತಿದೆ. ಇವತ್ತು ನೀವು ಇಲ್ಲವೆಂದರೆ, ಹೇಗೆ ನಾವು ಆ ಜನರಿಗೆ ಉತ್ತರ ಕೊಡುವುದು? ದಯವಿಟ್ಟು ಸಹಾನುಭೂತಿಯಿಂದ ವಿಮರ್ಶೆ ಮಾಡಿ. ನಾವು ಮಾನ್ಯ ಅಧ್ಯಕ್ಷರಿಗೆ ಮನವಿ ಮಾಡುತ್ತೇವೆ. ನಾಳೆಯವರೆಗೆ ಸದನವನ್ನು ಮುಂದೂಡಿ. ನೀವು ಬಿಲ್‌ನಲ್ಲಿ ಏನು ತೆಗೆದುಕೊಂಡು ಬರುತ್ತೀರೋ ತೆಗೆದುಕೊಂಡು ಬನ್ನಿ, ಅದನ್ನು ಪಾಸ್ ಮಾಡಿ ಕೊಡುತ್ತೇವೆ. ಅವರೂ ಬಡವರೇ. ಶಾಸಕರ ಪರವಾಗಿ ನಾನು ವಿನಂತಿ ಮಾಡುತ್ತೇನೆ. ಸಹಾನುಭೂತಿಯಿಂದ ಪರಿಗಣಿಸಿ.

ಶ್ರೀ ಎಸ್. ಸುರೇಶ್ ಕುಮಾರ್ : ಇಲ್ಲಿ ಒಂದು ತಾಂತ್ರಿಕ ತೊಂದರೆ ಇದೆ. ಈ Bill originate ಆಗಿದ್ದು Council ನಲ್ಲಿ Council ನಿಂದ ಸ್ವಲ್ಪ

ತಿದ್ದುಪಡಿಯಾಗಿ ಇಲ್ಲಿಗೆ ಬಂದಿದೆ. ಈಗ ನಾವು ಇಲ್ಲಿ amend ಮಾಡಿದರೆ, again it has to go back to the Council. The Council has been adjourned sinedie. ಅನಿರ್ದಿಷ್ಟ ಕಾಲ ಮುಂದೂಡಲಾಗಿದೆ. ನಾವು ಇವತ್ತು ಇದನ್ನು ಮಾಡದೇ ಇದ್ದರೆ ಇದೂ ಕೂಡ ಕಾನೂನಾಗುವುದಿಲ್ಲ. The Choice is yours.

(ಗೊಂದಲ)

ಶ್ರೀ ಕೃಷ್ಣ ಬೈರೇಗೌಡ : ಇದನ್ನು ಮಾಡಲೇಬೇಕು. ಇನ್ನು ಒಂದು ವಾರ ಬಿಟ್ಟು ನೀವು ಅಧಿವೇಶನ ಕರೆಯಿರಿ. ಆಗ ನಾವೆಲ್ಲಾ ಬಂದು ಪಾಸ್ ಮಾಡಿ ಕೊಡುತ್ತೇವೆ. ಇದು ಮಾಡಲೇಬೇಕು. ನೀವು ಮಾಡುತ್ತಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಬಡವರಿಗೆ ಅನುಕೂಲ ಆಗುತ್ತದೆ ಎಂದರೆ, ನೀವು ಒಂದು ದಿನದ ಮಟ್ಟಿಗೆ ಅಧಿವೇಶನ ಕರೆದರೂ ನಾವೆಲ್ಲಾ ಬರುತ್ತೇವೆ.

ಅಧ್ಯಕ್ಷರು : ಕಿ.ಮೀ. ವ್ಯಾಪ್ತಿ ತೆಗೆಯಿರಿ.

ಶ್ರೀ ಕೆ. ರಘುಪತಿ ಭಟ್ : ಮಾನ್ಯ ಅಧ್ಯಕ್ಷರೆ, ನನ್ನ ಒಂದು ವಿನಂತಿ ಏನೆಂದರೆ, ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದ ಹಾಗೆ ಇದನ್ನು ಮುಂದೂಡಬಾರದು. ಹಳ್ಳಿಗಳಿಗೆ ಅನುಕೂಲವಾಗಬಾರದು ಎಂದು ಅಲ್ಲ, ಅವರಿಗೆ ಅನುಕೂಲವಾಗಲಿ. ಆದರೆ ಅದರ ವ್ಯಾಪ್ತಿಯನ್ನು ಕಟ್ ಮಾಡಿ. ವಿಧಾನ ಪರಿಷತ್ತಿನಲ್ಲಿ ಆಗುವುದಿಲ್ಲ ಎಂದು ಹೇಳುವಂಥದ್ದು ಇದೆ. ಆ ವ್ಯಾಪ್ತಿಯನ್ನು ಮುಂದುವರೆಸಿದ್ದಾರೆ. 5. ಕಿ.ಮೀ., 8 ಕಿ.ಮೀ. ಅದನ್ನು ತೆಗೆಸಿ.

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ : ಮಾನ್ಯ ಅಧ್ಯಕ್ಷರೆ, ರೆವಿನ್ಯೂ ಕಾಯಿದೆ ತಿದ್ದುಪಡಿ ಬಗ್ಗೆ ಬಹುತೇಕವಾಗಿ ಯಾರೂ ಕೂಡ ವಿರೋಧ ಇಲ್ಲವೆಂದು ನಾನು ಭಾವಿಸುತ್ತೇನೆ. ಇಲ್ಲಿ ಎಲ್ಲರ ಸದುದ್ದೇಶ ಏನಿದೆ ಎಂದರೆ, ಬಡವರಿಗೆ ಸಹಾಯ ಮಾಡಬೇಕೆನ್ನುವ ದೃಷ್ಟಿಯಿಂದ ಗ್ರಾಮೀಣ ಪ್ರದೇಶದಲ್ಲಿ ಏನು ತಂದಿದ್ದಾರೆ, ಅದು ಆಗಲೇ ಬೇಕೆನ್ನುವುದು ಮೂಲಭೂತವಾಗಿ ಎಲ್ಲರದ್ದೂ ಒಪ್ಪಿಗೆ ಇದೆ. ಇಲ್ಲಿ ಬಂದಿರುವ ಪ್ರಶ್ನೆ ನಗರ ಪ್ರದೇಶದಲ್ಲಿಯೂ ಬಡವರಿದ್ದಾರೆ, ಅವರಿಗೂ ಕೂಡ ತರಬೇಕು. ಇಲ್ಲಿ ಎರಡು ವಿಚಾರ ಇದೆ, ಒಂದು, ಕಾನೂನಾತ್ಮಕವಾಗಿ ರೆವಿನ್ಯೂ Act ನಲ್ಲಿ ತರಬಹುದಾ? ಅಥವಾ

ನಗರಸಭೆ Act ನಲ್ಲಿ ತರಬೇಕಾ? ಇದು ಒಂದು. ಅದನ್ನು ನಾವು ನಮ್ಮ ಕಾನೂನು ತಜ್ಞರ ಜೊತೆ ಪರಿಶೀಲನೆ ಮಾಡುತ್ತೇವೆ. ನಗರಕ್ಕೆ ಏನು ಸಹಾಯ ಮಾಡಬೇಕು, ಅದರಲ್ಲಿ ಏನಾದರೂ ತಿದ್ದುಪಡಿ ತರುವುದಿದ್ದರೆ, ಅದನ್ನೂ ಕೂಡ ತರುವಂತಹ ಪ್ರಯತ್ನವನ್ನು ನಾವು ಮಾಡುತ್ತೇವೆ. ಇದು ಒಂದನೆಯದು. ಎರಡನೆಯದಾಗಿ, ಕೌನ್ಸಿಲ್ ಇವತ್ತು ಮುಗಿದಿರುವುದರಿಂದ ಆ ಕೆಲಸವನ್ನು ಮಾಡುವುದಕ್ಕಾಗುತ್ತಿಲ್ಲ. ಆದ್ದರಿಂದ ಕೂಡಲೇ ಗ್ರಾಮೀಣ ಪ್ರದೇಶದವರಿಗೆ ಆದಂತಹ ಅನುಕೂಲವನ್ನು ನಗರ ಪ್ರದೇಶಕ್ಕೆ ಏನು ಮಾಡಬೇಕೆಂದು ಖಂಡಿತವಾಗಿ ಕಾನೂನು ತಜ್ಞರ ಜೊತೆ ಚರ್ಚೆ ಮಾಡಿ ಮುಂದಿನ ಪರಿಶೀಲನೆ ಮಾಡಿ ಅವರಿಗೂ ಅನುಕೂಲ ಮಾಡಿಕೊಡುವುದಕ್ಕೆ ಭೇದಭಾವ ಇಲ್ಲದೆ ಇರುವ ಹಾಗೆ ಮಾಡುವ ಕೆಲಸವನ್ನು ನಾವು ಮಾಡುತ್ತೇವೆ. ಆದ್ದರಿಂದ ದಯವಿಟ್ಟು ಇದನ್ನು ಪಾಸ್ ಮಾಡಿಕೊಡ ಬೇಕೆಂದು ವಿನಂತಿ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ : ಏರಿಯಾ ಲಿಮಿಟ್ ತೆಗೆದು ಬಿಡಿ. ಅದೂ ಇಲ್ಲವೆಂದರೆ ಬಹಳ ತೊಂದರೆಯಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಏರಿಯಾ ಲಿಮಿಟ್ ತೆಗೆದು ಬಿಡಿ.

ಶ್ರೀ ಬಸವರಾಜ ಬೊಮ್ಮಾಯಿ : ನಿಮ್ಮ ಅಭಿಪ್ರಾಯವನ್ನು ಖಂಡಿತವಾಗಿ ಸಕಾರಾತ್ಮಕವಾಗಿ ತೆಗೆದುಕೊಂಡು ಕಾನೂನು ತಜ್ಞರ ಜೊತೆ ಚರ್ಚೆ ಮಾಡುತ್ತೇವೆ.

ಪರ್ಯಾಲೋಚನಾ ಪ್ರಸ್ತಾವ

ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ 2012

ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, 2012ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) (ವಿಧಾನ ಪರಿಷತ್ತಿನಿಂದ ಅಂಗೀಕೃ ತವಾದ ರೂಪದಲ್ಲಿರುವ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

2012ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) (ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ) ವಿಧೇಯಕವನ್ನು ಸಭೆಯು ಪರ್ಯಾಲೋಚಿಸುವುದು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು
ಸೂಚಿಸಬೇಕು.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ.

ಅಧ್ಯಕ್ಷರು : ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಉಳಿದ ಎಲ್ಲಾ ಸದಸ್ಯರುಗಳು ಏನೆಲ್ಲಾ ಸಲಹೆಗಳನ್ನು ಕೊಟ್ಟಿದ್ದೀರಿ ನಾವು ನಿಯಮವನ್ನು ಮಾಡುವಂತಹ ಸಂದರ್ಭದಲ್ಲಿ ಖಂಡಿತವಾಗಿ ಅದು ಅಷ್ಟನ್ನೂ ಕೂಡ ಯೋಚನೆ ಮಾಡಿ ತರುತ್ತೇವೆ.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಅಧ್ಯಕ್ಷರು : ಖಂಡ 2 ಮತ್ತು 3 ಖಂಡಗಳು ಈ ವಿಧೇಯಕದ ಅಂಗವಾಗಿರುತ್ತದೆ ಎಂಬುದು ಸಭೆಯ ಮುಂದಿರುವ ವಿಷಯ.

"ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು
ಸೂಚಿಸಬೇಕು.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ.

(ಖಂಡ 2 ಮತ್ತು 3ನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಮೊದಲನೆ ಖಂಡ ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು
ಸೂಚಿಸಬೇಕು.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ

(ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾಗಿವೆ.)

ಅಧ್ಯಕ್ಷರು : ಮಾನ್ಯ ಉಪ ಮುಖ್ಯ ಮಂತ್ರಿಗಳು ಅಂಗೀಕಾರ ಪ್ರಸ್ತಾವವನ್ನು ಮಂಡಿಸಬೇಕು.

ಪ್ರಸ್ತಾವದ ಅಂಗೀಕಾರ

ಶ್ರೀ ಕೆ.ಎಸ್. ಈಶ್ವರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, 2012ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) (ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವಂತೆ) ವಿಧೇಯಕವನ್ನು ಅಂಗೀಕರಿಸ ಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಗಿದೆ.
ಈಗ ಅದನ್ನು ಸಭೆಯ ಮತಕ್ಕೆ ಹಾಕುತ್ತೇನೆ.

2012ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) (ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವಂತೆ) ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು,
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು
ಸೂಚಿಸಬೇಕು.
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ. ವಿಧೇಯಕಕ್ಕೆ ಅನುಮೋದನೆ
ದೊರಕಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಅನುಬಂಧ-1)

12. ಪ್ರಕಟಣೆ :

ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನಪರಿಷತ್ತು 2012 ನೇ ಸಾಲಿನ ಈ ಕೆಳಕಂಡ ವಿಧೇಯಕಗಳನ್ನು ದಿನಾಂಕ: 01.08.2012 ಹಾಗೂ 02.08.2012 ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

1. ಕರ್ನಾಟಕ ಪೌರ ನಿಗಮಗಳ ಮತ್ತು ಕೆಲವು ಇತರೆ ಕಾನೂನು (ಎರಡನೇ ತಿದ್ದುಪಡಿ) ವಿಧೇಯಕ, 2012

2. ಕರ್ನಾಟಕ ಪೌರಸಭೆಗಳು ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ, 2012

3. ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ವಿಧೇಯಕ, 2012.

4. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಮತ್ತು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2012